


# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

# Karnataka Scout & Guide

Monthly Magazine

Vol -65 | Issue-10 | October 2024 | Pages: 32 | Annual Subscription: ₹ 100/-

ಸಂಪುಟ: 65 | ಸಂಚಿಕೆ: 10 | ಅಕ್ಟೋಬರ್ 2024 | ಪುಟಗಳು: 32 | ವಾರ್ಷಿಕ ಚಂದ ರೂ. 100/-


## ಕನ್ನಡ ರಾಜ್ಯೋತ್ಸವ ಮತ್ತು ದೀಪಾವಳಿ ಹಬ್ಬದ ಶುಭಾಶಯಗಳು









ಅಕ್ಟೋಬರ್ 05 ರಿಂದ 09ರ ವರೆಗೆ ಚಿಕ್ಕಮಗಳೂರಿನಲ್ಲಿ ನಡೆದ
44ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವದ
ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿದ ಪುಟಾಣಿಗಳು




ಅಕ್ಟೋಬರ್ 5 ರಿಂದ 9ರ ವರೆಗೆ ಚಿಕ್ಕಮಗಳೂರಿನಲ್ಲಿ ನಡೆದ 44ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವದ ಉದ್ಘಾಟನೆಯನ್ನು, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಮೀನಾ ನಾಗರಾಜು, ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊಫೆಸರ್ ಸಿ.ಎಂ. ತ್ಯಾಗರಾಜು, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ ಇತರ ರಾಜ್ಯ ಹಾಗು ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು, ಕಬ್ಸ್, ಬುಲ್‌ಬುಲ್ಸ್‌ಗಳು ಉಪಸ್ಥಿತರಿದ್ದರು.



ಅಕ್ಟೋಬರ್ 18ರಂದು ಶಾಲಾ ಶಿಕ್ಷಣ ಇಲಾಖೆಯ ಮಾನ್ಯ ಆಯುಕ್ತರಾದ ಡಾ॥ ಕೆ.ವಿ. ತ್ರಿಲೋಕ್ ಚಂದ್ರ, ಭಾ.ಆ.ಸೇ. ಇವರನ್ನು ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಮಾಜಿ ವಿಧಾನ ಪರಿಷತ್ ಸದಸ್ಯರು ಮತ್ತು ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್ಸ್) ರವರು ಭೇಟಿ ಮಾಡಿ ಪುಷ್ಪಗುಚ್ಛ ನೀಡಿದರು. ನಂತರ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಸಂಸ್ಥೆಯ ಸ್ಕಾರ್ಫ್‌ನ್ನು ಮಾನ್ಯ ಆಯುಕ್ತರಿಗೆ ಹಾಕಿ ಗೌರವಿಸಿದರು.

ಪೋಷಕರು
ಪಿ.ಜಿ.ಆರ್. ಸಿಂಧ್ಯ

ಗೌರವ ಅಧ್ಯಕ್ಷರು
ಡಾ. ಗೊ.ರು. ಚನ್ನಬಸಪ್ಪ

ಅಧ್ಯಕ್ಷರು
ಕೊಂಡಜ್ಜಿ ಬ. ಷಣ್ಮುಖಪ್ಪ

ಸಂಪಾದಕರು
ಕೆ. ಗಂಗಪ್ಪಗೌಡ

ಸಹಸಂಪಾದಕರು
ಎನ್. ಶ್ರೀನಿವಾಸನ್

ಸಂಚಾಲಕರು
ಬಿ.ಎಸ್. ರವೀಂದ್ರ

ಸದಸ್ಯರು
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್‍ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

# KARNATAKA Scout & Guide

MONTHLY NEWS MAGAZINE

Vol: 65 Issue : 10 October 2024

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ಸಂಪಾದಕೀಯ ...05
ಮಹಾತ್ಮ ಗಾಂಧಿ ಹಾಗು ಲಾಲ್ ಬಹದ್ದೂರ್ ಶಾಸ್ತ್ರಿ ಅವರುಗಳ ಜಯಂತಿ ...06
44ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್ ಬುಲ್ ಉತ್ಸವ ...07
ನವೆಂಬರ್ 2024ರ ಮಾಹೆಯ ಕಾರ್ಯಕ್ರಮಗಳ ವಿವರಗಳು ...10
ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳವರ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ ...11
ಜೋಟಾ-ಜೋಟಿ ...12
ಸಂಘಟಕರುಗಳಿಗೆ ತರಬೇತಿ ...13
ರಾಜ್ಯಪುರಸ್ಕಾರ ಪರೀಕ್ಷಾ ಶಿಬಿರಗಳ ವರದಿ ...14
ದಸರ ಮತ್ತು ಹಾಸನಾಂಬ ಸೇವಾ ಕಾರ್ಯಕ್ರಮ ...16
ಕನ್ನಡ ರಾಜ್ಯೋತ್ಸವ (ನಮ್ಮ ನಾಡಹಬ್ಬ) ...17
ರತನ್ ಟಾಟಾ ...18
ಅಭಿನಂದನೆಗಳು ...19
ಜಿಲ್ಲಾ ವಾರ್ತೆಗಳು ...20
ಶ್ರದ್ಧಾಂಜಲಿ ...30

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್–ಗೈಡ್ ಬಂಧುಗಳಿಗೆ ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು**

ದೀಪಾವಳಿ ಎಂದ ತಕ್ಷಣ ನೆನಪಾಗುವುದೇ ಬೆಳಕು. ಬೆಳಕು ಜೀವನದಲ್ಲಿ ಪ್ರಗತಿಯ ಸಂಕೇತವಾಗಿದ್ದು, ಪ್ರತಿ ವ್ಯಕ್ತಿಯ ಕನಸುಗಳನ್ನು ಪೂರೈಸಲು ದಾರಿ ನೀಡುತ್ತದೆ. ಅಂತರಂಗದ ಬೆಳಕು ನಮ್ಮ ಬದುಕಿಗೆ ದಾರಿಯಾದರೆ, ಬಹಿರಂಗ ಬೆಳಕು ಜಗತ್ತನ್ನು ಕಾಣಲು ನೆರವಾಗುತ್ತದೆ. ಈ ದೀಪಾವಳಿ ಎಲ್ಲರ ಬದುಕಿನಲ್ಲಿ ಖುಷಿಯ ಬೆಳಕನ್ನು ತುಂಬಲಿ. ಸಂತೋಷ, ಸಮೃದ್ಧಿ ಶಾಂತಿ, ನೆಮ್ಮದಿಯನ್ನು ಹೊತ್ತು ತರಲಿ ಎಂದು ಹಾರೈಸುತ್ತೇನೆ. ಎಂದಿನಂತೆ ನಾವೆಲ್ಲರೂ ಈ ದೀಪಾವಳಿಯನ್ನು ಪರಿಸರಸ್ನೇಹಿ ದೀಪಾವಳಿಯನ್ನಾಗಿ ಆಚರಣೆ ಮಾಡುವ ಮೂಲಕ ನಿಸರ್ಗಕ್ಕೆ ನಮ್ಮ ಶ್ರದ್ಧೆಯನ್ನು ಸಲ್ಲಿಸೋಣ.

ನವೆಂಬರ್ 01 ರಂದು ಕನ್ನಡ ರಾಜ್ಯೋತ್ಸವ. ಇದು ಕನ್ನಡಿಗರ ಹೆಮ್ಮೆ. ನಮ್ಮ ಸುಂದರ ಭಾಷೆ, ಸಂಸ್ಕೃತಿ ಮತ್ತು ಪರಂಪರೆಯ ಆಚರಣೆ. 1956ರಲ್ಲಿ ಕನ್ನಡನಾಡು ಏಕೀಕೃತವಾದ ಈ ಮಹತ್ವದ ದಿನ ಕನ್ನಡದ ಭಾವನಾತ್ಮಕ ಬಂಧನವನ್ನು ಪ್ರತಿನಿಧಿಸುತ್ತದೆ. ಕರ್ನಾಟಕವು ಈಗ 51ನೇ ಕನ್ನಡ ರಾಜ್ಯೋತ್ಸವದ ಆಚರಣೆಯ ಸಂಭ್ರಮದಲ್ಲಿದೆ. ನಮ್ಮ ಭಾಷೆ, ನಾಡು ಮತ್ತು ಸಂಸ್ಕೃತಿಯ ಬಗ್ಗೆ ಅಭಿಮಾನವನ್ನು ವ್ಯಕ್ತಪಡಿಸುವ ಈ ಹಬ್ಬ ಪ್ರತಿ ಕನ್ನಡಿಗನ ಮನದಲ್ಲಿ ವಿಶೇಷ ಸ್ಥಾನ ಹೊಂದಿದೆ. ನಮ್ಮ ಭಾಷೆಯ ಶ್ರೇಷ್ಠತೆಯನ್ನು ಉಳಿಸಲು, ಈ ಮಣ್ಣಿನ ಋಣದಲ್ಲಿರುವ ಪ್ರತಿವ್ಯಕ್ತಿಯ ಹಾಗೂ ಪ್ರತಿಯೊಂದು ಸಂಘ ಸಂಸ್ಥೆಯ ಜವಾಬ್ದಾರಿ ಬಹಳ ಮುಖ್ಯವಾಗಿದೆ. ಕರ್ನಾಟಕದ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಕನ್ನಡದ ಪ್ರೀತಿ, ಭಾಷೆಯ ಮೌಲ್ಯವನ್ನು ಉಳಿಸಲು ಅನುಕರಣೀಯ ಕಾರ್ಯದಲ್ಲಿ ತೊಡಗಿದೆ. ಮುಂದೆಯೂ ಅದನ್ನು ಮುಂದುವರೆಸಿಕೊಂಡು ಹೋಗೋಣ.

ನವೆಂಬರ್ ತಿಂಗಳಲ್ಲಿ ಅನೇಕ ಪ್ರಮುಖ ರಾಷ್ಟ್ರೀಯ ದಿನಾಚರಣೆಗಳು ನಡೆಯುತ್ತವೆ. ನವೆಂಬರ್ 13 ಮೌಲಾನಾ ಅಬ್ದುಲ್ ಕಲಾಂ ಆಜಾದ್ ಅವರ ಜಯಂತಿಯ ಪ್ರಯುಕ್ತ 'ರಾಷ್ಟ್ರೀಯ ಶಿಕ್ಷಣ ದಿನಾಚರಣೆ', ನವೆಂಬರ್ 14 ರಂದು ಪಂಡಿತ್ ಜವಹಾರಲಾಲ್ ನೆಹರು ಅವರ ಜಯಂತಿ ಪ್ರಯುಕ್ತ 'ಮಕ್ಕಳ ದಿನಾಚರಣೆ' 26 ರಂದು ಭಾರತ ಸಂವಿಧಾನವನ್ನು ಅಂಗೀಕರಿಸಿದ ದಿನದ ನೆನಪಿಗಾಗಿ "ಸಂವಿಧಾನ ದಿನಾಚರಣೆ ". ಈ ಎಲ್ಲಾ ದಿನಾಚರಣೆಗಳು ಮಕ್ಕಳಿಗೆ ನಮ್ಮ ದೇಶದ ಮೌಲ್ಯಗಳು, ಸಂಸ್ಕೃತಿ ಮತ್ತು ಇತಿಹಾಸದ ಬಗ್ಗೆ ಅರಿವು ಮೂಡಿಸಲು ಅತ್ಯುತ್ತಮ ಅವಕಾಶವಾಗಿರುತ್ತವೆ. ಈ ಮಹತ್ವದ ದಿನಗಳನ್ನು ಅರ್ಥಪೂರ್ಣವಾಗಿ ಆಚರಿಸೋಣ.

ಇನ್ನು ನವೆಂಬರ್ 7 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಭಾರತದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ 1909ರಲ್ಲಿ ಆರಂಭವಾದರೂ, 1950ರಲ್ಲಿ ಭಾರತ ಸರ್ಕಾರವು ಸ್ಕೌಟ್ಸ್–ಗೈಡ್ಸ್ ಸಂಸ್ಥೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಒಕ್ಕೂಟವಾಗಿ ರೂಪಿಸಿತು. ಈ ವರ್ಷ ನಮ್ಮ ಸಂಸ್ಥೆ 75ನೇ ವರ್ಷವನ್ನು ಸಂಭ್ರಮಿಸುತ್ತಿದೆ. ಈ ವಿಶೇಷ ಸಂದರ್ಭದ ಅಂಗವಾಗಿ, ಸ್ಕೌಟ್ಸ್ ಗೈಡ್ಸ್ ಆಂದೋಲನದ ಮಹತ್ವವನ್ನು ಪುನರುಜ್ಜೀವನಗೊಳಿಸಲು, ನಮ್ಮ ರಾಷ್ಟ್ರ ಸಂಸ್ಥೆಯು ವಿವಿಧ ಕಾರ್ಯಚಟುವಟಿಕೆಗಳನ್ನು ಆಯೋಜಿಸುತ್ತಿದೆ. ಸುವರ್ಣ ಮಹೋತ್ಸವದ ಅಂಗವಾಗಿ ಒಂದು ವರ್ಷಪೂರ್ತಿ ನಡೆಯಲಿರುವ ಕಾರ್ಯಕ್ರಮಗಳಿಗೆ ಚಾಲನೆ ನೀಡಲು ಬೆಂಗಳೂರಿನಲ್ಲಿ ರಾಷ್ಟ್ರಮಟ್ಟದ ಕಾರ್ಯಕ್ರಮವನ್ನು ಆಚರಿಸುವ ಅವಕಾಶ ನಮ್ಮ ರಾಜ್ಯ ಸಂಸ್ಥೆಗೆ ಸಿಕ್ಕಿರುವುದು ಹೆಮ್ಮೆಯ ವಿಚಾರ. ಅದರ ಹಿನ್ನೆಲೆಯಲ್ಲಿ ಇನ್ನು ಎಲ್ಲಾ ರಾಜ್ಯಗಳ ರಾಜ್ಯ ಮುಖ್ಯ ಆಯುಕ್ತರು ಮತ್ತು ಕಾರ್ಯದರ್ಶಿಗಳ ಸಮ್ಮೇಳನವನ್ನು ಆಯೋಜಿಸುವ ಸಿದ್ದತೆಯಲ್ಲಿದ್ದೇವೆ. ಈ ಕಾರ್ಯಕ್ರಮದ ಯಶಸ್ವಿ ಆಯೋಜನೆಗೆ ನಮ್ಮ ರಾಜ್ಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆಗಳ ಎಲ್ಲ ಪದಾಧಿಕಾರಿಗಳ ಸಹಕಾರವನ್ನು ಅಪೇಕ್ಷಿಸುತ್ತೇನೆ.

ಕರ್ನಾಟಕದಲ್ಲಿ ಸ್ಕೌಟ್ಸ್ ಗೈಡ್ಸ್ ಚಳುವಳಿ ದೃಢವಾಗಿ ಬೇರೂರಲು ಶ್ರಮಿಸಿದ ಪ್ರಮುಖರಲ್ಲಿ ಒಬ್ಬರಾದ ದಿವಂಗತ ಶ್ರೀ ಕೊಂಡಜ್ಜಿ ಬಸಪ್ಪ ಅವರು ಈ ಚಳುವಳಿಗೆ ತಮ್ಮ ಸಂಪೂರ್ಣ ಜೀವನವನ್ನು ಅರ್ಪಿಸಿದ್ದಾರೆ. ನವೆಂಬರ್ 14 ಅವರ ಪುಣ್ಯಸ್ಮರಣೆ. ನಮ್ಮ ಸಂಸ್ಥೆ ಅವರಿಗೆ ಗೌರವ ಸಲ್ಲಿಸುವ ರೂಪದಲ್ಲಿ ಇದುವರೆಗೂ ನಡೆಸಿಕೊಂಡು ಬಂದಿರುವಂತೆ, ಆ ದಿನ ಕೊಂಡಜ್ಜಿಯಲ್ಲಿ "ಕೊಂಡಜ್ಜಿ ಬಸಪ್ಪ ಅವರ ಪುಣ್ಯತಿಥಿ ಹಾಗೂ ರಾಜ್ಯ ಮಟ್ಟದ ಬ್ಯಾಡ್ಜ್ ವರ್ಕ್" ಶಿಬಿರದ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿದೆ. ಸಂಬಂಧಪಟ್ಟವರೆಲ್ಲರೂ ಇದರಲ್ಲಿ ಭಾಗವಹಿಸಬೇಕಾಗಿ ವಿನಂತಿ.

ನಮ್ಮ ಮಕ್ಕಳಿಗೆ ರಾಜ್ಯಪುರಸ್ಕಾರ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ರಾಜ್ಯದ ವಿವಿಧ ಭಾಗಗಳಲ್ಲಿ ನಡೆದ ಪರೀಕ್ಷಾ ಶಿಬಿರಗಳು ಯಶಸ್ವಿಯಾಗಿರುವುದು ಸಂತೋಷದ ವಿಚಾರ. ಈ ಪರೀಕ್ಷೆಗಳ ಪ್ರಕ್ರಿಯೆಯನ್ನು ಸುಲಭಗೊಳಿಸುವಲ್ಲಿ ಸಹಾಯ ಮತ್ತು ನೆರವನ್ನು ನೀಡಿರುವ ಜೈನ್ ವಿಶ್ವವಿದ್ಯಾಲಯಕ್ಕೆ, ವಿಶೇಷವಾಗಿ ಅದರ ಜಂಟಿ ರಿಜಿಸ್ಟ್ರಾರ್ ರಾದ ಶ್ರೀ ಎಂ.ಎಸ್. ಸಂತೋಷ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ರಾಷ್ಟ್ರಪತಿ ಸ್ಕೌಟ್ ಆಗಿರುವ ಸಂತೋಷ್ ಅವರು ರಾಜ್ಯ ಸಂಸ್ಥೆಯ ಕೇಂದ್ರ ಸ್ಥಾನಿಕ ಆಯುಕ್ತರಾಗಿ ಮೆರೆಯುತ್ತಿರುವ ಜವಾಬ್ದಾರಿ ಹಾಗೂ ಅವರ ಆಸಕ್ತಿ ಮತ್ತು ನಿಷ್ಠೆಗಾಗಿ ನಾನು ಆಭಾರಿ. ಪರಿಕ್ಷಾ ಪ್ರಕ್ರಿಯೆಗಳು ಯಶಸ್ವಿಯಾಗಿ ನಡೆಸಲು ನಮ್ಮ ಸಂಸ್ಥೆಯ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಶ್ರಮವನ್ನು ಶ್ಲಾಘಿಸುತ್ತೇನೆ.

ಇತ್ತೀಚೆಗೆ ಚಿಕ್ಕಮಗಳೂರಿನಲ್ಲಿ ಆಯೋಜಿಸಲಾಗಿದ್ದ "ರಾಜ್ಯ ಮಟ್ಟದ ಕಬ್ – ಬುಲ್‌ಬುಲ್ ಉತ್ಸವ" ಅತ್ಯಂತ ಯಶಸ್ವಿಯಾಗಿ ಜರುಗಿದೆ. ಇದರ ಆಯೋಜನೆಗೆ ವಿಶೇಷ ಆಸಕ್ತಿ ಮತ್ತು ಬದ್ಧತೆಯನ್ನು ತೋರಿದ ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯ ಎಲ್ಲ ಪದಾಧಿಕಾರಿಗಳಿಗೆ ವಿಶೇಷವಾಗಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಷಡಕ್ಷರಿ ಅವರಿಗೆ ಹಾಗೂ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಮಹೇಶ್ ಅವರಿಗೆ ಅಭಿನಂದನೆಗಳು. ಸಂಪೂರ್ಣ ಸಹಕಾರ ನೀಡಿದ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾದ ಶ್ರೀಮತಿ ಮೀನಾ ನಾಗರಾಜ್ ರವರಿಗೆ, ಜಿಲ್ಲಾಡಳಿತದ ಎಲ್ಲ ಅಧಿಕಾರಿಗಳಿಗೆ, ವಿವಿಧ ಶಿಕ್ಷಣ ಸಂಸ್ಥೆಗಳಿಗೆ, ದಾನಿಗಳಿಗೆ ನಮ್ಮ ಸಂಸ್ಥೆ ಆಭಾರಿಯಾಗಿರುತ್ತದೆ. ರಾಜ್ಯದ ವಿವಿಧ ಭಾಗಗಳಿಂದ ಮಕ್ಕಳನ್ನು ಕರೆತಂದು ಅವರನ್ನು ಸುರಕ್ಷಿತವಾಗಿ ಹಿಂತಿರುಗಿಸಿದ ಎಲ್ಲಾ ಶಿಕ್ಷಕರು ಮತ್ತು ದಳನಾಯಕರುಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಉತ್ಸವದ ಭಾಗವಾಗಿ ಸೃಷ್ಟಿಯಾಗುವ ಹರ್ಷೋಲ್ಲಾಸ, ಉತ್ಸಾಹದ ನೆನಪುಗಳು ಮಕ್ಕಳಿಗೆ ಅವರ ಜೀವನದಲ್ಲಿ ಅಪರೂಪವಾದ ಅನುಭವಗಳನ್ನು ಕೊಡುತ್ತವೆ. ಅವರ ಬಾಲ್ಯವನ್ನು ಬಹಳ ವಿಭಿನ್ನ ಮತ್ತು ಅರ್ಥಪೂರ್ಣವಾಗಿಸುತ್ತವೆ ಎಂದು ಭಾವಿಸಿದ್ದೇನೆ.

ಇನ್ನು ಅಕ್ಟೋಬರ್ ನಲ್ಲಿ ವಿವಿಧ ಜಿಲ್ಲೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ನಮ್ಮ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಒಂದಾದ 'ಗೀತಗಾಯನ ಸ್ಪರ್ಧೆ'ಗಳು ನಡೆದಿವೆ. ಈ ಕಾರ್ಯಕ್ರಮವು ಭಾಗವಹಿಸುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಉತ್ತಮ ಅನುಭವ ನೀಡುವುದು ಮತ್ತು ತಮ್ಮ ಸಂಗೀತ ಕೌಶಲ್ಯವನ್ನು ಪ್ರದರ್ಶಿಸಲು ಒಂದು ಅವಕಾಶವಾಗಿದೆ. ಈ ಕಾರ್ಯಕ್ರಮಕ್ಕೆ ದುಡಿಯುತ್ತಿರುವ ಹಾಗೂ ಭಾಗವಹಿಸುವ ಪ್ರತಿಯೊಬ್ಬರಿಗೂ ಅಭಿನಂದನೆಗಳು.

ನಮ್ಮ ದೇಶದ ಹೆಮ್ಮೆಯ ಕೈಗಾರಿಕೋದ್ಯಮಿ ಮತ್ತು ಟಾಟಾ ಗ್ರೂಪ್‌ನ ಅಧ್ಯಕ್ಷರಾಗಿದ್ದ ಶ್ರೀ ರತನ್ ಟಾಟಾ ಅವರ ನಿಧನ ದೇಶಕ್ಕೆ ತುಂಬಲಾರದ ನಷ್ಟವನ್ನುಂಟುಮಾಡಿದೆ. ಟಾಟಾ ಸಂಸ್ಥೆಯನ್ನು ಜಾಗತಿಕ ಮಟ್ಟದಲ್ಲಿ ವಿಸ್ತರಿಸಲು ಅವರ ನಾಯಕತ್ವ ಪ್ರಮುಖ ಪಾತ್ರ ವಹಿಸಿದೆ. ಅವರು ನಡೆಸಿದ ಜೀವನಶೈಲಿ, ಅವರಲ್ಲಿದ್ದ ಪ್ರಗತಿಯ ದೃಷ್ಟಿಕೋನ, ಸಾಮಾಜಿಕ ಹೊಣೆಗಾರಿಕೆಗಳು ಪ್ರತಿಯೊಬ್ಬರಿಗೂ ಪ್ರೇರಣೆ ನೀಡುವಂಥವಾಗಿವೆ. ಅವರೊಬ್ಬ ದಾರ್ಶನಿಕ ನಾಯಕರಾಗಿದ್ದರು. ಅವರು 60 ವರ್ಷಗಳ ಕಾಲ ನಡೆಸಿಕೊಂಡು ಬಂದ ಪರಂಪರೆ ಮುಂದುವರೆಯಲಿ ಎಂದು ಆಶಿಸುತ್ತೇನೆ. ಅವರ ನಿಧನಕ್ಕೆ ನಮ್ಮ ಸಂಸ್ಥೆ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

**ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು.
ಕನ್ನಡವೇ ಸತ್ಯ, ಕನ್ನಡವೇ ನಿತ್ಯ

# ಸಂಪಾದಕೀಯ



ಮಾನ್ಯರೆ,

ಮಹಾತ್ಮ ಗಾಂಧೀಜಿಯವರ ಆಶಯದಂತೆ, ಶಿಕ್ಷಣವು ವಿದ್ಯಾರ್ಥಿಗಳಲ್ಲಿಯ ಮಾನಸಿಕ, ಆಧ್ಯಾತ್ಮಿಕ ಮತ್ತು ದೈಹಿಕ ಸಾಮರ್ಥ್ಯಗಳನ್ನು ವೃದ್ಧಿಸುವುದಾಗಿದೆ. (Education is to develop in students the capabilities relating to Head, Heart and Hand) ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು, ಶಿಕ್ಷಣವು ವಿದ್ಯಾರ್ಥಿಗಳಿಗೆ ಅತ್ಯಂತ ಮೌಲ್ಯಯುತವಾಗಿರುವುದು ಎಂಬುದನ್ನು ಸ್ಪಷ್ಟಪಡಿಸಿ, ಅವರುಗಳು ತಮ್ಮ ಬದುಕನ್ನು ಸಾರ್ಥಕಪಡಿಸಿಕೊಳ್ಳುವಲ್ಲಿ ಮತ್ತು ಮೌಲ್ಯಯುತ ಬದುಕನ್ನು ವೃದ್ಧಿಸಿಕೊಳ್ಳುವಲ್ಲಿಯ ಘನಉದ್ದೇಶಗಳನ್ನು ಹೊಂದಿದ್ದು, ಅದನ್ನು ಸಾಕ್ಷಾತ್ಕಾರಗೊಳಿಸುವಲ್ಲಿ ಎಲ್ಲರ ಶ್ರಮ ಅಗತ್ಯ ಆಗಿರುವುದನ್ನು ಸ್ಪಷ್ಟಪಡಿಸಿರುವುದು ಸರಿಯಷ್ಟೆ. ಅದರಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ವಿದ್ಯಾರ್ಥಿಗಳ ಜ್ಞಾನ, ಕೌಶಲ್ಯ ಮತ್ತು ನಡವಳಿಕೆಗಳನ್ನು ವೃದ್ಧಿಸುವಲ್ಲಿ ಪ್ರಗತಿಪರ ಸ್ವಶಿಕ್ಷಣ ಕ್ರಮಗಳ ವಿಧಾನವನ್ನು ಅನುಷ್ಠಾನಗೊಳಿಸುತ್ತಿದ್ದು, ವಿದ್ಯಾರ್ಥಿಗಳೆಲ್ಲರ ಗುಣಾತ್ಮಕ ಶಿಕ್ಷಣದ ಸಾಧನೆಗೆ ಪ್ರೇರಕ ಮತ್ತು ಪೂರಕ ಆಗಿರುವ ರಾಜ್ಯ ಪುರಸ್ಕಾರ ಪರೀಕ್ಷೆಯನ್ನು ಪ್ರತಿವರ್ಷವೂ ಏರ್ಪಡಿಸುತ್ತಿದ್ದೇವಾದರೂ ಈ ವರ್ಷ ವಿಶಿಷ್ಟವಾಗಿ ನಿರ್ವಹಣೆ ಆಗಿರುವುದು ಹರ್ಷದಾಯಕ.

ಈ ರಾಜ್ಯಪುರಸ್ಕಾರ ಪರೀಕ್ಷೆಯು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ವಿವಿಧ ಹಂತಗಳಲ್ಲಿ ಸ್ಕೌಟ್ಸ್–ಗೈಡ್ಸ್ ಚಳವಳಿಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ತಮ್ಮ ಜ್ಞಾನ, ಕೌಶಲ್ಯ ಮತ್ತು ಮನೋಭಾವನೆಗಳನ್ನು ಆರೋಗ್ಯ, ನಡತೆ, ಕಲೆ ಮತ್ತು ಸೇವೆಗಳ ಆಧಾರಸ್ಥಂಭಗಳ ಆಧಾರದ ಮೇರೆಗೆ ಪದಕಗಳನ್ನು ಅರ್ಜಿಸಿರುವುದನ್ನು ಪರಿಗಣಿಸುವುದಾಗಿರುವುದು. ಪರೀಕ್ಷೆಗೆ ಒಳಪಡದ ಬದುಕು, ಬದುಕೇ ಅಲ್ಲ (An Un-examined life is not worth-living) ಎಂಬಂತೆ ಪ್ರಗತಿಪರ ಸ್ವಶಿಕ್ಷಣದ ಕ್ರಮಗಳ ವಿಧಾನದಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ಪರಿಶೀಲಿಸುವಲ್ಲಿ ಈ ರಾಜ್ಯಪುರಸ್ಕಾರ ಪರೀಕ್ಷೆಯು ನಿರ್ವಹಣೆ ಆಗುತ್ತಿದೆ.

ಅದರಂತೆ, 2023–24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ರಾಜ್ಯ ಪುರಸ್ಕಾರ ಪರೀಕ್ಷೆಗೆ ಅರ್ಹರಾದ 6800ಕ್ಕೂ ಹೆಚ್ಚು ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ಈ ಕೆಳಕಂಡ 2 ಹಂತಗಳಲ್ಲಿ ಪರೀಕ್ಷೆಗಳನ್ನು ನಿರ್ವಹಿಸಲಾಗಿರುವುದು.

1) ಬರಹದ ಪರೀಕ್ಷೆ (on-line Writing Examination)

2) ಮೌಖಿಕ ಮತ್ತು ಪ್ರಾತ್ಯಕ್ಷಿಕ ಪರೀಕ್ಷೆ (Oral and Practical Tests Examination)

on-lineನಲ್ಲಿ ಏರ್ಪಟ್ಟ ರಾಜ್ಯಪುರಸ್ಕಾರ ಪರೀಕ್ಷೆಯ ಯಶಸ್ವಿ ನಿರ್ವಹಣೆಯಲ್ಲಿ ಶ್ರೀ ಎಂ.ಎಸ್.ಸಂತೋಷ್, ಜಾಯಿಂಟ್ ರಿಜಿಸ್ಟ್ರಾರ್, ಜೈನ್ ಮಹಾವಿದ್ಯಾಲಯ ಇವರ ಸಲಹೆ, ಸಹಕಾರ, ಮಾರ್ಗದರ್ಶನ ಅಭಿನಂದನಾರ್ಹ. ಸುಮಾರು 6800ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ on-line ಪರೀಕ್ಷೆಯಲ್ಲಿ ಭಾಗವಹಿಸಿ, ಯಶಸ್ವಿಹೊಂದಿರುವುದು ಒಂದು ಮಹತ್ ಸಾಧನೆಯೇ ಸೈ. ಆ ಎಲ್ಲಾ ವಿದ್ಯಾರ್ಥಿಗಳು on-line ಪರೀಕ್ಷೆ ವ್ಯವಸ್ಥೆಯಲ್ಲಿ ಭಾಗವಹಿಸಿ, ತಮ್ಮ ಕಿರಿವಯಸ್ಸಿನಲ್ಲೇ ಇಂತಹ ವಿಶಿಷ್ಠ–ವಿಶೇಷ ಪರೀಕ್ಷಾ ವ್ಯವಸ್ಥೆಯ ಅನುಭವ ಹೊಂದುವಂತಾದ್ದು ಶ್ಲಾಘನೀಯ.

ಅಕ್ಟೋಬರ್ 2024ರ ಮಾಸದ ವಿವಿಧ ದಿನಾಂಕಗಳಂದು ವಿವಿಧ ತರಬೇತಿ ಕೇಂದ್ರಗಳಲ್ಲಿ ಪರೀಕ್ಷ ವ್ಯವಸ್ಥೆಗೊಳಿಸಿದ್ದು, ರಾಜ್ಯ ಪುರಸ್ಕಾರದ ಮೌಖಿಕ ಮತ್ತು ಪ್ರಾತ್ಯಕ್ಷಿಕ ಪರೀಕ್ಷೆಗಳಲ್ಲೂ ಈ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ಸು ಹೊಂದುವಲ್ಲಿ ಶ್ರಮಿಸಿರುವುದು ಅಭಿನಂದನಾರ್ಹ.

ಈ ಪ್ರತಿಷ್ಠಿತ ಮತ್ತು ಅತ್ಯಗತ್ಯ ರಾಜ್ಯಪುರಸ್ಕಾರ ಪರೀಕ್ಷೆಗಳನ್ನು, on-line ಮೂಲಕ ಮತ್ತು ವೈಯಕ್ತಿಕ ಪರೀಕ್ಷೆಗಳ ಮೂಲಕ ಯಶಸ್ವಿಯಾಗಿ ನಿರ್ವಹಣೆ ಆಗುವಲ್ಲಿ ಶ್ರಮಿಸಿದ ಶ್ರೀ ಎಂ.ಎಸ್. ಸಂತೋಷ್, ಜಂಟಿ ರಿಜಿಸ್ಟ್ರಾರ್, ಜೈನ್ ಮಹಾವಿದ್ಯಾನಿಲಯ, ಬೆಂಗಳೂರು ಇವರಿಗೆ ನಮ್ಮ ರಾಜ್ಯ ಸಂಸ್ಥೆಯ ಎಲ್ಲಾ ಅಧಿಕಾರಿ, ಸಿಬ್ಬಂದಿ ವೃಂದದವರಿಗೆ, ಎಲ್ಲಾ ಜಿಲ್ಲಾ /ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳಿಗೆ, ವಿಶೇಷವಾಗಿ ಮೌಖಿಕ ಮತ್ತು ಪ್ರಾತ್ಯಕ್ಷಿಕ ಪರೀಕ್ಷೆಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ, ಇದನ್ನು ಏರ್ಪಡಿಸಿ, ಮೌಲ್ಯಮಾಪನ ಮಾಡಿ, ಪ್ರೋತ್ಸಾಹಿಸಿದ ಎಲ್ಲಾ ಪರೀಕ್ಷಾ ಮಾರ್ಗದರ್ಶಕ ದಳನಾಯಕರುಗಳಿಗೆ / ಮೌಲ್ಯ ಮಾಪಕರುಗಳಿಗೆ ಅನಂತಾನಂತ ಅಭಿನಂದನೆಗಳನ್ನು ಈ ಮೂಲಕ ತಿಳಿಸಬಯಸುತ್ತೇನೆ. ಅದರಂತೆ, ಈ ರಾಜ್ಯಪುರಸ್ಕಾರ ಪರೀಕ್ಷೆಯಲ್ಲಿ ಭಾಗವಹಿಸಿದ ಸರ್ವ ಸ್ಕೌಟ್ಸ್–ಗೈಡ್ಸ್‌ಗಳಿಗೆ ಅಭಿನಂದನೆಗಳೊಂದಿಗೆ ಶುಭಹಾರೈಕೆಗಳು. ನಿಜವಾದ ಅರ್ಥದಲ್ಲಿ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಪರಿಣಾಮಕಾರಿಯಾದ ಮತ್ತು ಪ್ರಭಾವಶಾಲಿಯಾಗಿರುವ ಈ ರಾಜ್ಯಪುರಸ್ಕಾರ ಪರೀಕ್ಷೆಯನ್ನು ಸಕಾಲದಲ್ಲಿ ಸಮರ್ಪಕವಾಗಿ ನಿರ್ವಹಣೆ ಆಗುವಲ್ಲಿ ಸರ್ವರೂ ಶ್ರಮಿಸುತ್ತಿರಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ 2024ರ ಮಾಹೆಯ ವಿಶೇಷ ಕಾರ್ಯಕ್ರಮಗಳಾದ ಮಹಾತ್ಮಗಾಂಧಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿರವರುಗಳ ಜನ್ಮದಿನಾಚರಣೆಗಳನ್ನು, ಜಾಂಬೂರಿ–ಆನ್–ದಿ–ಏರ್/ ಜಾಂಬೂರಿ–ಆನ್–ದಿ–ಇಂಟರ್‌ನೆಟ್ (JOTA-JOTI) ಕಾರ್ಯಕ್ರಮಗಳನ್ನು ಸ್ಕೌಟ್ಸ್ ಮತ್ತು ಗೈಡ್ಸ್‌ನ ಇತರೆ ಚಟುವಟಿಕೆಗಳನ್ನು, ಕಾರ್ಯಕ್ರಮಗಳನ್ನು, ತರಬೇತಿ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಸರ್ವರಿಗೂ ಕೃತಜ್ಞತೆಗಳನ್ನು ತಿಳಿಸಬಯಸುತ್ತೇನೆ.

ಅಕ್ಟೋಬರ್ 05 ರಿಂದ 09ರ ವರೆಗೆ ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯಿಂದ ಚಿಕ್ಕಮಗಳೂರಿನಲ್ಲಿ ಏರ್ಪಡಿಸಿದ್ದ ಕಬ್ಸ್–ಬುಲ್‌ಬುಲ್ಸ್ ಉತ್ಸವವು ಬಹಳ ವಿಜೃಂಭಣೆಯಿಂದ, ಹರ್ಷದಾಯಕ ಮತ್ತು ಪ್ರಭಾವಯುತವಾಗಿ ನಿರ್ವಹಣೆ ಆಗಿ ಎಲ್ಲರ ಗೌರವ ಮತ್ತು ಆದರಗಳಿಗೆ ಪಾತ್ರವಾಗಿರುವಲ್ಲಿಯ ಅವರೆಲ್ಲರ ಕಾಯಾ, ವಾಚಾ, ಮನಸಾ ಶ್ರಮಕ್ಕೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ಮಹಾತ್ಮ ಗಾಂಧಿ ಹಾಗು ಲಾಲ್ ಬಹದ್ದೂರ್ ಶಾಸ್ತ್ರಿ ಅವರುಗಳ ಜಯಂತಿ



ಅಕ್ಟೋಬರ್ 02 ರಂದು 155ನೇ ಮಹಾತ್ಮ ಗಾಂಧಿ ಹಾಗು ಲಾಲ್ ಬಹದ್ದೂರ್ ಶಾಸ್ತ್ರಿ ಅವರುಗಳ ಜಯಂತಿಯ ಅಂಗವಾಗಿ ರಾಜ್ಯ ಕೇಂದ್ರ ಕಛೇರಿ ಆವರಣದಲ್ಲಿ ಸರ್ವಧರ್ಮ ಪ್ರಾರ್ಥನೆಯನ್ನು ಆಯೋಜನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ "ಕಸವನ್ನು ಕಸವಾಗಿರಿಸದೇ, ರಸವನ್ನಾಗಿಸುವ ಕರೆಗಂಟೆ" ಟೈಮ್ ಅಪ್ ವಿಶೇಷ ಯೋಜನಾ ಕಾರ್ಯಕ್ರಮಕ್ಕೆ ಶ್ರೀ ಪಿ.ಜಿ.ಆರ್ ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಚಾಲನೆಯನ್ನು ನೀಡಿದರು. ಶ್ರೀ ಕೊಂಡಜ್ಜಿ ಬಿ. ಷಣ್ಮುಖಪ್ಪ ರವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವು ನೆರವೇರಿತು. ಡಾ|| ರೀತು ಗಂಜಿಗಟ್ಟಿರವರು ಟೈಮ್ ಆಪ್ ವಿಶೇಷ ಯೋಜನಾ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಶಾಲಾ ಮಕ್ಕಳಿಗೆ ಅವರ ಮನೆಯಲ್ಲಿರುವ ಪ್ಲಾಸ್ಟಿಕ್ ವೇಸ್ಟೇಜ್ ಅನ್ನು ಸಂಗ್ರಹಿಸಲು ಗೋಣಿಚೀಲ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋದನ ಸಂಸ್ಥೆಯ ನಿರ್ದೇಶಕರಾದ ಶ್ರೀ ಮಹೇಶ್‌ರವರು, ವೇಸ್ಟ್ ಇಂಪ್ಯಾಕ್ಟ್ ಸಂಸ್ಥೆಯ ಶ್ರೀಮತಿ ಗಾಯತ್ರಿರವರು, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಕೆ. ಗಂಗಪ್ಪ ಗೌಡರವರು ಹಾಗೂ ರಾಜ್ಯ/ ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಉತ್ತರ ಜಿಲ್ಲಾ ಪಧಾದಿಕಾರಿಗಳು, ದಳನಾಕರುಗಳು, ಕಬ್ಸ್, ಬುಲ್-ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಉಪಸ್ಥಿತರಿದರು.





ಶಾಲಾ ಶಿಕ್ಷಣ ಇಲಾಖೆಯ ನೂತನ ಆಯುಕ್ತರಾಗಿರುವ
ಕರ್ನಾಟಕ ಸರ್ಕಾರದ ದಕ್ಷ ಐ.ಎ.ಎಸ್. ಅಧಿಕಾರಿಗಳಾದ

**ಡಾ|| ಕೆ.ವಿ. ತ್ರಿಲೋಕ್ ಚಂದ್ರ**

ಅವರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ
ಸಂಸ್ಥೆಯ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳು



# 44ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್ ಬುಲ್ ಉತ್ಸವ -2024
# ಸಂಕ್ಷಿಪ್ತ ವರದಿ

ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ 44ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್ ಬುಲ್ ಉತ್ಸವವನ್ನು ಅಕ್ಟೋಬರ್ 05 ರಿಂದ 09ರ ವರಗೆ ನಗರದ ಹೌಸಿಂಗ್ ಬೋರ್ಡ್ ಬಿ.ಜಿ.ಎಸ್ ಮಂಜುನಾಥೇಶ್ವರ ಶಾಲಾ ಆವರಣ ಚಿಕ್ಕಮಗಳೂರು ಜಿಲ್ಲೆಯಲ್ಲಿ ಏರ್ಪಡಿಸಲಾಗಿತ್ತು.

ಕ್ರಿಯಾಶೀಲತೆಯೇ ಕಲಿಕೆ ಎನ್ನುವುದು ಉತ್ಸವದ ಧ್ಯೇಯ ವಾಕ್ಯವಾಗಿತ್ತು. ಉತ್ಸವವನ್ನು ಕಬ್-ಬುಲ್ ಬುಲ್‌ಗಳ ಘನ ವಂದನೆ ಮತ್ತು ಧ್ವಜಾರೋಹಣದೊಂದಿಗೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ.ಎಂ ಎನ್ ಷಡಕ್ಷರಿ ರವರ ನೇತೃತ್ವದಲ್ಲಿ ಪ್ರಾರಂಭಿಸಲಾಯಿತು.




ಉತ್ಸವದ ಉಧ್ಘಾಟನಾ ಸಮಾರಂಭವು ಅಕ್ಟೋಬರ್ 05 ರಂದು ಸಂಜೆ, 4 ಗಂಟೆಗೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಉತ್ಸವದ ಉಧ್ಘಾಟನೆಯನ್ನು ದೀಪಬೆಳಗಿಸುವುದರ ಮೂಲಕ ನೆರವೇರಿಸಿದ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಿಕ್ಕಮಗಳೂರು ಶ್ರೀಮತಿ ಮೀನಾ ನಾಗರಾಜು ಇವರು ಮಾತನಾಡುತ್ತಾ 'ಪ್ರಕೃತಿಯಲ್ಲಿ ನಿಂತ ಬೆಟ್ಟ, ಹರಿಯುವ ನದಿ, ಹಾರುವ ಹಕ್ಕಿ, ಅಲೆದಾಡುವ ಪರಿಸರದ ಮಧ್ಯೆ ಪರಿಸರದ ಅನುಭವವನ್ನು ಪಡೆಯುವಂತೆ' ಹೇಳಿದ ಅವರು 5 ದಿನಗಳ ಕಾಲ ನೆಡೆಯುವ ಉತ್ಸವಕ್ಕೆ ಎಲ್ಲಾ ಅಗತ್ಯ ಸಿದ್ದತೆಗಳನ್ನು ಉತ್ತಮವಾಗಿ ಏರ್ಪಡಿಸಲಾಗಿದೆ ಎಂದು ತಿಳಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳ ಕಬ್-ಬುಲ್‌ಬುಲ್‌ಗಳನ್ನು ಸ್ವಾಗತಿಸಿ ಸಂಸ್ಥೆಯ ಚಟುವಟಿಕೆಗಳನ್ನು ಪ್ರಶಂಸಿದರು.

ಬೆಳಗಾವಿ ರಾಣಿ ಚನ್ನಮ್ಮ ವಿಶ್ವ ವಿದ್ಯಾಲಯದ ಉಪಕುಲಪತಿಗಳಾದ ಪ್ರೋ.ಸಿ.ಎಂ ತ್ಯಾಗರಾಜ್ ಮಾತನಾಡಿ, ಬೌದ್ಧಿಕ ಜಗತ್ತನ್ನು ಮೀರಿದ "ಜೀವನದ ಆಧ್ಯಾತ್ಮಿಕ ಮೌಲ್ಯವನ್ನು" ಹುಡುಕುವ ಬದ್ಧತೆಯನ್ನು ವಿದ್ಯಾರ್ಥಿಗಳು ರೂಢಿಸಿಕೊಂಡು ಶಿಸ್ತು ಕಲಿಯುವ ಒಂದು ಸಾಮಾಜಿಕ ಆಯಾಮ ಇದಾಗಿದೆ. ರಾಷ್ಟ್ರೀಯ ಶಾಂತಿ, ಸೌಹಾರ್ಧತೆ ಕಲಿಯಲು ಸ್ಕೌಟ್ಸ್ ಸಂಸ್ಥೆ ಪ್ರಮುಖ ಪಾತ್ರವಹಿಸಿದೆ, ಮಕ್ಕಳ ಬೌದ್ಧಿಕ ಪ್ರತಿಭೆಯನ್ನು ಬೆಳೆಸಲು ಇದು ಉಪಯುಕ್ತವೆಂದು ತಿಳಿಸಿದರು. ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ, ಪ್ರಾಸ್ತಾವಿಕವಾಗಿ ಉತ್ಸವದ ಬಗ್ಗೆ ಮಾತನಾಡಿದರು. ಶ್ರೀ ಎ.ಎನ್. ಮಹೇಶ್, ರಾಜ್ಯ ಸಂಸ್ಥೆಯ ಉಪಾಧ್ಯಕ್ಷರು ಮತ್ತು ರಾಜ್ಯ ಅಧ್ಯಕ್ಷರು ಪರಿಸರ ಮೌಲ್ಯಮಾಪನ ಸಮಿತಿ, ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಮತ್ತು ಆಯುಕ್ತರುಗಳು ಉಪಸ್ಥಿತರಿದ್ದರು.

ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಉತ್ಸವದ ಶಿಬಿರಾರ್ಥಿಗಳನ್ನು ಕುರಿತು, ಮಾತನಾಡಿ "ಸ್ಕೌಟ್ಸ್ ಚಳುವಳಿ ಇದು ವಿಶ್ವ ವಿಖ್ಯಾತಿಯನ್ನು ಪಡೆದಿದ್ದು ಇದು ಯುವ ಜನಾಂಗದ ಕೂಟ, ಶಿಬಿರ ಉದ್ದೇಶವು ಯುವ ಪೀಳಿಗೆಯ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯವಾಗಿದೆ" ಎಂದು ತಿಳಿಸಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಕಬ್ಸ್ – ಬುಲ್ ಬುಲ್‌ಗಳಿಗೆ ಶುಭ ಹಾರೈಸಿದರು.



ಶ್ರೀಮತಿ ಪೂರ್ಣಿಮ ನಿರೂಪಣೆ ಮಾಡಿ, ಶ್ರೀ ಎಂ.ಎನ್. ಷಡಕ್ಷರಿ ಜಿಲ್ಲಾ ಮುಖ್ಯ ಆಯುಕ್ತರವರು ಸ್ವಾಗತಿಸಿ, ಶ್ರೀಮತಿ ಮಮತ ಜಿಲ್ಲಾ ಆಯುಕ್ತರು(ಗೈಡ್) ರವರು ವಂದಿಸಿದರು.

ಸ್ಥಳೀಯ ಪ್ರತಿಭಾ ಪ್ರದರ್ಶನ ಮತ್ತು ಜಿಲ್ಲಾ ಸಾಂಸ್ಕೃತಿಕ ಮೇಳವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಪ್ರಾಯೋಜಿಸಿದ್ದು, ಶ್ರೀ ಸುರೇಂದ್ರ ನಾಯಕ್ ಮತ್ತು ತಂಡದವರು ನಡೆಸಿ ಕೊಟ್ಟರು. ಇದೇ ಸಂದರ್ಭದಲ್ಲಿ ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಕೆ.ಪಿ ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ(ರಿ) ಕೊಟ್ಟಿಗೆಹಾರ ಇವರಿಂದ ಏರ್ಪಡಿಸಿದ್ದ ಕೀಟಗಳ ಅದ್ಭುತ ಲೋಕವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು.






ಅಕ್ಟೋಬರ್ 06 ರಂದು ಬೆಳಿಗ್ಗೆ 8 ಗಂಟೆಗೆ ಚಿಕ್ಕಮಗಳೂರು ನಗರದ ತಹಶೀಲ್ದಾರ್ ಕಛೇರಿಯಿಂದ ಪಥಸಂಚಲನ ಏರ್ಪಡಿಸಲಾಗಿತ್ತು. ಪಥ ಸಂಚಲನದ ಉದ್ಘಾಟನೆಯನ್ನು ನಗರ ಆರ್.ಟಿ.ಓ ಅಧಿಕಾರಿ ಆದ ಶ್ರೀ.ಆರ್.ರಾಕೇಶ್ ಕುಮಾರ್ ರವರು ಹಸಿರು ನಿಶಾನೆ ತೋರುವುದರ ಮೂಲಕ ಉದ್ಘಾಟಿಸಿದರು.

ಬೇಲೂರು ಮತ್ತು ಹಳೇಬೀಡು ಐತಿಹಾಸಿಕ ಪ್ರೇಕ್ಷಣಿಯ ಸ್ಥಳಗಳ ವಿಕ್ಷಣೆಗೆ 26 ಬಸ್ಸುಗಳನ್ನು ಆಯೋಜಿಸಿದ್ದು ಬೆಳಿಗ್ಗೆ 9 ಗಂಟೆಗೆ ಶ್ರೀ ಶಿವಾನಂದ, ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆ ಸಮಿತಿ ಇವರು ಹಸಿರುನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು.






ಸಂಜೆ 5.30ಕ್ಕೆ ಉತ್ಸವದಲ್ಲಿ ರೆಡ್‌ಫ್ಲವರ್ ಮತ್ತು ಕಲರವ ಕಾರ್ಯಕ್ರಮವನ್ನು, ಶ್ರೀಯುತ ರಾಮಚಂದ್ರರಾವ್ ಕಾಳೆ, ಎ.ಎಲ್.ಟಿ(ಕಬ್) ಮತ್ತು ಕೇಂದ್ರ ಕಛೇರಿ ಆಯುಕ್ತರು(ಕಬ್) ರವರು ಉದ್ಘಾಟಿಸಿ ಕಾರ್ಯಕ್ರಮದ ಯಶಸ್ವಿಗೆ ಶುಭ ಹಾರೈಸಿದರು.

ಅಕ್ಟೋಬರ್ 07 ರಂದು ಘನವಂದನೆ ಮತ್ತು ಧ್ವಜಾರೋಹಣ ಕಾರ್ಯಕ್ರಮದೊಂದಿಗೆ ಚಟುವಟಿಕೆಗಳು ಪ್ರಾರಂಭವಾದವು. 9 ಗಂಟೆಗೆ ಸರಿಯಾಗಿ ಸಾಹಸಮಯ ಕ್ರೀಡಾ ಚಟುವಟಿಕೆಗಳ ಉದ್ಘಾಟನೆಯನ್ನು ಶ್ರೀಮತಿ ಮಂಜುಳ ಹುಲಹಳ್ಳಿ, ಉಪನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಮಗಳೂರು ಇವರು ಹಾಗೂ ಶ್ರೀ ಎಂ.ಎನ್ ಷಡಕ್ಷರಿ, ಜಿಲ್ಲಾ ಮುಖ್ಯ ಆಯುಕ್ತರು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಎ. ಎನ್ ಮಹೇಶ್, ರಾಜ್ಯ ಸಂಸ್ಥೆ ಉಪಾಧ್ಯಕ್ಷರು, ಶ್ರೀ ಜಿಮ್ಮಿ ಸಿಕ್ವೇರಾ, ಎಲ್.ಟಿ(ಸ್ಕೌಟ್), ಸಾಹಸಮಯ ಚಟುವಟಿಕೆಗಳ ನಾಯಕ ಉಪಸ್ಥಿತರಿದ್ದು ವಿವಿಧ ಸಾಹಸಮಯ ಚಟುವಟಿಕೆಗಳ ಬೇಸ್‌ಗಳನ್ನು ಪರಿಚಯಿಸಿದರು.



ಅಕ್ಟೋಬರ್ 07 ರಂದು ಮಧ್ಯಾಹ್ನ 2 ಗಂಟೆಗೆ ಕರಕುಶಲ ಪ್ರತಿಭಾ ಪ್ರದರ್ಶನ, ಚಿತ್ರಕಲೆ, ಗಾಳಿಪಟ, ಕಸದಿಂದ ರಸ ಮಾಡುವ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಜರಾಲ್ಡ್ ಲೋಬೋ ಸಂಸ್ಥಾಪಕ ಅಧ್ಯಕ್ಷರು, ಸೆಂಟ್ ಮೇರಿಸ್ ಇಂಟರ್ ನ್ಯಾಷನಲ್ ಸ್ಕೂಲ್, ಚಿಕ್ಕಮಗಳೂರು ಮತ್ತು ಶ್ರೀ.ಸುರೇಂದ್ರ ಬಿ.ಜಿ.ಎಸ್ ಪಿ.ಯು ಕಾಲೇಜಿನ ಪ್ರಾಂಶುಪಾಲರು, ಹಸ್ತ ರೇಖಾ ಚಿತ್ರ ಬಿಡಿಸುವುದರ ಮೂಲಕ ಉದ್ಘಾಟಿಸಿ ಕಬ್ ಮತ್ತು ಬುಲ್‌ಬುಲ್ಸ್‌ಗಳ ಚಟುವಟಿಕೆಗಳನ್ನು ಕುರಿತು ಪ್ರಶಂಸೆ ವ್ಯಕ್ತಪಡಿಸಿದರು. ನಂತರ ಸಾಹಸಮಯ ಚಟುವಟಿಕೆಗಳನ್ನು ವೀಕ್ಷಣೆ ಮಾಡಿದರು.






ಅಕ್ಟೋಬರ್ 07 ರಂದು ಸಂಜೆ 6 ಗಂಟೆಗೆ ನೆಡೆದ ಶಿಬಿರಾಗ್ನಿ ರೆಡ್ ಫ್ಲವರ್ ಮತ್ತು ಕಲರವ ಕಾರ್ಯಕ್ರಮವನ್ನು ಡಾ. ರಮೇಶ್, ಉಪನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಿಕ್ಕಮಗಳೂರು ಇವರು ದೀಪಬೆಳಗಿಸುವ ಮೂಲಕ ಉದ್ಘಾಟಿಸಿ ಶುಭ ಹಾರೈಸಿದರು.



ಅಕ್ಟೋಬರ್ 08 ರಂದು ಉತ್ಸವದಲ್ಲಿ ಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಘನವಂದನೆ ಧ್ವಜಾರೋಹಣದ ನಂತರ ಕ್ವಿಜ್ ಕಾರ್ಯಕ್ರಮವನ್ನು ಶ್ರೀಮತಿ ಸಂಧ್ಯಾರಾಣಿ, ಎಲ್.ಟಿ(ಕಬ್) ಮತ್ತು ಜಿಲ್ಲಾ ಪದಾಧಿಕಾರಿಗಳ ನೇತೃತ್ವದಲ್ಲಿ ಹಮ್ಮಿ ಕೊಳ್ಳಲಾಗಿತ್ತು. ಶ್ರೀಮತಿ ಕವಿತಾ ಶೇಖರ, ನಗರ ಸಭಾ ಸದಸ್ಯರು, ಉದ್ಘಾಟಿಸಿದರು. ಜಂಗಲ್ ಪ್ಲೇ ಮತ್ತು ತಾರಾ ಸ್ಟೋರಿ ಕಾರ್ಯಕ್ರಮವನ್ನು ಶಿಬಿರದ ಸಿಬ್ಬಂದಿಗಳ ಸಹಾಯದಿಂದ ನೆರವೇರಿಸಲಾಯಿತು.

ಎಲ್ಲಾ ಕಬ್ ಮತ್ತು ಬುಲ್‌ಬುಲ್‌ಗಳಿಗೆ ನಗರದ ಪವಿತ್ರ ವನಕ್ಕೆ ಹೊರ ಸಂಚಾರ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಅಕ್ಟೋಬರ್ 08 ರಂದು ಸಂಜೆ 4 ಗಂಟೆಗೆ ಬಿ.ಜಿ.ಎಸ್ ಶಾಲೆಯ ಆವರಣದಲ್ಲಿ ಕಬ್ ಮತ್ತು ಬುಲ್‌ಬುಲ್ ಸಮಾರೋಪ ಸಮಾರಂಭವು ಮಾನ್ಯ ಶ್ರೀ ಹೆಚ್.ಡಿ ತಮ್ಮಯ್ಯ, ಶಾಸಕರು, ವಿಧಾನಸಭಾ ಕ್ಷೇತ್ರ, ಚಿಕ್ಕಮಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ.ಎಲ್ ಶಂಕರ್‌ರವರು ಸಮಾರೋಪ ಭಾಷಣ ಮಾಡಿ "ಬಹುತೇಕ ರಾಷ್ಟ್ರಗಳಲ್ಲಿ ಇತ್ತೀಚಿನ ದಿನಗಳಲ್ಲಿ ಸ್ಕೌಟ್ ಪ್ರಚಲಿತವಾಗುತ್ತಿರುವುದನ್ನು ಕಾಣಬಹುದು ಎಂದು ತಿಳಿಸಿ. ಸ್ವಯಂ ಪ್ರೇರಿತ ಶಿಸ್ತಿನ ಜೀವನದ ಆಯ್ಕೆ ಇಂತಹ ಸಂಸ್ಥೆಗಳಿಂದ ಸಾಧ್ಯ" ಎಂದು ತಿಳಿಸಿದರು.




ಉತ್ಸವದ ಅಂಗವಾಗಿ ಹೊರತರಲಾದ ದಿಕ್ಸೂಚಿ ಸ್ಮರಣ ಸಂಚಿಕೆಯನ್ನು ಭದ್ರಾ ಕಾಡಾ, ಅಧ್ಯಕ್ಷ, ಡಾ. ಕೆ.ಪಿ. ಅಂಶುಮಂತ್ ಬಿಡುಗಡೆ ಮಾಡಿ, ಮಾತನಾಡಿ ಪುಟ್ಟ ಮಕ್ಕಳು ಇಂತಹ ಸಂಸ್ಥೆಗಳ ಸದಸ್ಯರಾಗಿ, ದೇಶಕ್ಕೆ ಕೀರ್ತಿ ತರುವುದರೊಂದಿಗೆ ತಮ್ಮ ಭವಿಷ್ಯವನ್ನೂ ಉತ್ತಮವಾಗಿ ರೂಪಿಸಿಕೊಳ್ಳವಲ್ಲಿ ಶ್ರಮಿಸಲು ವಿನಂತಿಸಿದರು.

ಶಾಸಕರಾದ ಶ್ರೀ ಹೆಚ್.ಡಿ ತಮ್ಮಯ್ಯರವರು ಮಾತನಾಡಿ "ಬೆಳೆಯುವ ಪೈರು ಸಿರಿ ಮೊಳಕೆಯಲ್ಲಿಯೇ ಎಂಬಂತೆ" ವಿದ್ಯಾರ್ಥಿಗಳಲ್ಲಿ ಕೌಶಲ್ಯ, ಸಾಹಿತ್ಯ, ಸಾಂಸ್ಕೃತಿಕ, ಅಭಿರುಚಿಗಳ ಜೊತೆಗೆ ನಾಯಕತ್ವ ಗುಣ ಬೆಳೆಸಲು ಸ್ಕೌಟ್ಸ್, ಗೈಡ್ಸ್ ಸಹಕಾರಿಯಾಗಿದೆ" ಎಂದು ತಿಳಿಸಿದರು.

ಶ್ರೀಮತಿ ಕವಿತಾ ಶೇಖರ, ನಗರ ಸಭಾ ಸದಸ್ಯರು, ಮಾತನಾಡಿ "ವಿದ್ಯಾರ್ಥಿಗಳು ಹಾಡಿದ ಉತ್ಸವ ಗೀತೆಯು ಸ್ಕೌಟಿಂಗ್‌ನಲ್ಲಿ ಕಲಿಯಬೇಕಾದ ಎಲ್ಲಾ ಅಂಶಗಳನ್ನೂ ಒಳಗೊಂಡಿದೆ ಎಂದು ತಿಳಿಸಿ, ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಒಳ್ಳೆಯ ವೇದಿಕೆಯಾಗಿದೆ" ಎಂದರು. ನಗರಾಭಿವೃದ್ಧಿ ಪ್ರಾಧಿಕಾರದ, ಅಧ್ಯಕ್ಷರಾದ ಶ್ರೀ ನಯಾಜ್ ಮಾತನಾಡಿ "ಇಂತಹ ಕಾರ್ಯಕ್ರಮಗಳ ಆಯೋಜನೆಯಿಂದ ಮಕ್ಕಳಲ್ಲಿ ಧೈರ್ಯ ಉತ್ಸಾಹ ಹೆಚ್ಚಾಗುತ್ತದೆ, ಎಂದು ಇಂತಹ ವಿದ್ಯಾರ್ಥಿಗಳು ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಂಡು ಬೆಳೆಯಬೇಕು" ಎಂದರು.

ಶ್ರೀ ಮಂಜುನಾಥೇಶ್ವರ ವಿದ್ಯಾಸಂಸ್ಥೆ ಮುಖ್ಯ ಶಿಕ್ಷಕ ಶ್ರೀ.ಚಂದ್ರಶೇಖರ ರವರು ಮಾತನಾಡಿ, "ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಸಲು ಸ್ಕೌಟ್ಸ್ ಕಾರ್ಯಕ್ರಮಗಳು ಪೂರಕವಾಗಿರುವುದು ಎಂದು ತಿಳಿಸಿ ವಿದ್ಯಾರ್ಥಿಗಳು ಶಿಬಿರದಲ್ಲಿ ಕಲಿತ ವಿಷಯಗಳನ್ನು ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು" ಎಂದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ ರವರು ಮಾತನಾಡಿ "ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಹೊಸ ತನ ಹುಟ್ಟು ಹಾಕುತ್ತವೆ". ಕರ್ನಾಟಕ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರು ಶ್ರೀ ಎ.ಎನ್. ಮಹೇಶ್, ಶ್ರೀ ಪಣಿರಾಜ್, ಜಿಲ್ಲಾ



ಆಯುಕ್ತರು (ಸ್ಕೌಟ್), ಶ್ರೀ ನೀಲ ಕಂಠಾಚಾರ್, ಶ್ರೀಮತಿ ಮಮತ, ಜಿಲ್ಲಾ ಆಯುಕ್ತರು(ಗೈಡ್), ಶ್ರೀ ಎಲ್.ಟಿ. ಲೋಕೇಶ್, ರಾಜ್ಯ ಸಹಾಯಕ ಕಾರ್ಯದರ್ಶಿರವರು ಹಾಗೂ ಶ್ರೀ ಬೇಬಿ ಮ್ಯಾಥ್ಯೂ, ಜಿಲ್ಲಾ ಮುಖ್ಯ ಆಯುಕ್ತರು ಕೊಡಗು ಮತ್ತು ಇವರ ತಂಡದವರು ಉಪಸ್ಥಿತಿರಿದ್ದರು.

ಇದೇ ಸಂದರ್ಭದಲ್ಲಿ ಸಂಸ್ಥೆಯಲ್ಲಿ 40 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ ಶ್ರೀ ನೀಲಕಂಠಾಚಾರ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಸಂಧ್ಯಾರಾಣಿ, ಎಲ್.ಟಿ(ಕಬ್) ಜಿಲ್ಲಾ ತರಬೇತಿ ಆಯುಕ್ತರು ರವರನ್ನು ಗೌರವಿಸಿ ಅಭಿನಂದಿಸಲಾಯಿತು.

ಅಕ್ಟೋಬರ್ 09 ರಂದು ಬೆಳಿಗ್ಗೆ 7.30ಕ್ಕೆ ಸರ್ವಧರ್ಮ ಸಮನ್ವಯ ಪ್ರಾರ್ಥನೆಯನ್ನೂ ಏರ್ಪಡಿಸಲಾಗಿತ್ತು. ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್ ಷಡಕ್ಷರಿ ಹಾಗೂ ಇತರ ಪದಾಧಿಕಾರಿಗಳು ಹಾಗೂ ಶಿಬಿರದ ಎಲ್ಲಾ ಪದಾಧಿಕಾರಿಗಳೂ ಉಪಸ್ಥಿತಿಯಲ್ಲಿ ಉತ್ಸವದ ಧ್ವಜ ಅವರೋಹಣದೊಂದಿಗೆ ಉತ್ಸವವನ್ನು ಮುಕ್ತಾಯಗೊಳಿಸಲಾಯಿತು.



ಅಕ್ಟೋಬರ್ 25ರಂದು ಚೆನ್ನಮ್ಮನ ಕಿತ್ತೂರು ಇಲ್ಲಿ ಸ್ಥಳೀಯ ಸಂಸ್ಥೆಯ ಸಹಯೋಗದೊಂದಿಗೆ ಬೆಳಗಾವಿ ಜಿಲ್ಲಾ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳ ಮೇಳವು ಜರುಗಿತು. ಸದರಿ ಮೇಳವನ್ನು ಬೈಲಹೊಂಗಲ ಉಪ ವಿಭಾಗಾಧಿಕಾರಿಗಳಾದ ಶ್ರೀಮತಿ ಪ್ರಭಾವತಿ, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ರಾಜ್ಯ ಸಂಸ್ಥೆ ಉಪಾಧ್ಯಕ್ಷರು, ಶ್ರೀ ಗಜಾನನ ಮಣ್ಣಿಕೇರಿ, ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಬೆಳಗಾವಿ ದಕ್ಷಿಣ, ಶ್ರೀಮತಿ ಲೀಲಾವತಿ ಎಸ್. ಹಿರೇಮಠ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಚೆನ್ನಮ್ಮನ ಕಿತ್ತೂರು ಶ್ರೀ ತುಬಾಕದ ಇವರು ಚಾಲನೆ ನೀಡಿದರು. ಮೇಳದ ಅಂಗವಾಗಿ ಚೆನ್ನಮ್ಮನ ವೃತ್ತದಿಂದ ಉತ್ಸವದ ವೇದಿಕೆಯವರೆಗೆ ಪಥ ಸಂಚಲನೆ ನಡೆಯಿತು ಸದರಿ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಶಾಲೆಗಳಿಂದ 800ಕ್ಕೂ ಹೆಚ್ಚು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ ಸ್ಕೌಟರ್ ಮತ್ತು ಗೈಡರ್‌ಗಳು ಮತ್ತು ಇತರ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು, ಸಂಘಟಕರುಗಳು ಭಾಗವಹಿಸಿದ್ದರು.

## ನವೆಂಬರ್ 2024ರ ಮಾಹೆಯ ಕಾರ್ಯಕ್ರಮಗಳ ವಿವರಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಕನ್ನಡ ರಾಜ್ಯೋತ್ಸವ | 01.11.2024 | ರಾಜ್ಯ, ಜಿಲ್ಲಾ, ಸ್ಥಳೀಯ, ದಳ ಹಂತಗಳಲ್ಲಿ |
| 2 | ಸಂಸ್ಥಾಪನಾ ದಿನಾಚರಣೆ | 07.11.2024 | ರಾಜ್ಯ, ಜಿಲ್ಲಾ, ಸ್ಥಳೀಯ, ದಳ ಹಂತಗಳಲ್ಲಿ |
| 3 | ಸ್ಕೌಟ್-ಗೈಡ್ ಸಪ್ತಾಹ | 7 ರಿಂದ 14.11.2024 | ರಾಜ್ಯ, ಜಿಲ್ಲಾ, ಸ್ಥಳೀಯ, ದಳ ಹಂತಗಳಲ್ಲಿ |
| 4 | ವಿಭಾಗೀಯ ಮಟ್ಟದ ಗೀತಗಾಯನ ಸ್ಪರ್ಧೆ<br>ಮೈಸೂರು ವಿಭಾಗ<br>ಬೆಂಗಳೂರು ವಿಭಾಗ<br>ಬೆಳಗಾವಿ ವಿಭಾಗ<br>ಕಲಬುರ್ಗಿ ವಿಭಾಗ | <br>12.11.2024<br>19.11.2024<br>20.11.2024<br>21.11.2024 | <br>ವಿದ್ಯಾವರ್ಧಕ ಕಾಲೇಜು, ಮೈಸೂರು<br>ಬೆಸೆಂಟ್ ಪಾರ್ಕ್, ದೊಡ್ಡಬಳ್ಳಾಪುರ<br>ಜಿಲ್ಲಾ ಕಛೇರಿ, ಧಾರವಾಡ<br>ಗುರುವಿಧ್ಯಾಪೀಠ, ಕಲಬುರ್ಗಿ |
| 5 | ಆರ್.ಓ.ಟಿ (R.O.T) | 27 ರಿಂದ 01.12.2024 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ |
| 6 | Pre-ALT | 25 ರಿಂದ 01.12.2024 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ |
| 7 | Basic Course for Air Scouter/Guider | 19 ರಿಂದ 25.11.2024 | ಹೆಚ್.ಎ.ಎಲ್. ಬೆಂಗಳೂರು |
| 8 | ಪದಕ ತರಬೇತಿ ಶಿಬಿರ ಮತ್ತು<br>ದಿ. ಕೊಂಡಜ್ಜಿ ಬಸಪ್ಪನವರ 42ನೇ ಪುಣ್ಯಸ್ಮರಣೆ | 12 ರಿಂದ 14.11.2024 | ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ |
| 9 | ರಾಜ್ಯ ಪುರಸ್ಕಾರ ರೋವರ್ಸ್-ರೇಂಜರ್ಸ್ ಪರೀಕ್ಷಾ ಶಿಬಿರ | 14 ರಿಂದ 17.11.2024 | 1. ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ<br>2. ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ |

# ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳವರ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರದ ಸಂಕ್ಷಿಪ್ತ ವರದಿ

ಸೆಪ್ಟೆಂಬರ್ 24 ರಿಂದ 30ರ ವರೆಗೆ, ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಶ್ರೀ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ ಇಲ್ಲಿ ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳವರ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳನ್ನು ರಾಜ್ಯ ಸಂಸ್ಥೆ ವತಿಯಿಂದ ಆಯೋಜಿಸಲಾಗಿತ್ತು.

## ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ರೋವರ್ ಸ್ಕೌಟ್ ಲೀಡರ್ ಮೂಲ ತರಬೇತಿ ಶಿಬಿರದಲ್ಲಿ 29 ಶಿಬಿರಾರ್ಥಿಗಳು ಭಾಗವಹಿಸಿದ್ದು, ಶ್ರೀ ಸತ್ಯಜೀತ್ ಚಟರ್ಜಿ, ಎ.ಎಲ್.ಟಿ (ರೋ) ಶಿಬಿರದ ನಾಯಕರಾಗಿದ್ದರು. ಮುಂದುವರೆದ ತರಬೇತಿ ಶಿಬಿರದಲ್ಲಿ 18 ಶಿಬಿರಾರ್ಥಿಗಳು ಭಾಗವಹಿಸಿದ್ದು, ಶ್ರೀ ಪ್ರತೀಮ್ ಕುಮಾರ್, ಎ.ಎಲ್.ಟಿ (ರೋ) ಶಿಬಿರದ ನಾಯಕರಾಗಿದ್ದರು.

ರೇಂಜರ್ ಲೀಡರ್ ಮೂಲ ತರಬೇತಿ ಶಿಬಿರದಲ್ಲಿ 13 ಶಿಬಿರಾರ್ಥಿಗಳು ಭಾಗವಹಿಸಿದ್ದು. ಶ್ರೀಮತಿ ಅಂಜುಳಾ, ಎಲ್.ಟಿ (ರೇ) ಶಿಬಿರದ ನಾಯಕಿಯಾಗಿದ್ದರು. ಮುಂದುವರೆದ ತರಬೇತಿ ಶಿಬಿರದಲ್ಲಿ 7 ಶಿಬಿರಾರ್ಥಿಗಳು ಭಾಗವಹಿಸಿದ್ದು, ಶ್ರೀಮತಿ ರಾಮಲತಾ ಬಿ.ವಿ., ಎಲ್.ಟಿ (ರೇ) ಶಿಬಿರದ ನಾಯಕರಾಗಿದ್ದರು.



ರೋವರ್ ಸ್ಕೌಟ್ ಲೀಡರ್ ಮೂಲ ತರಬೇತಿ ಶಿಬಿರ



ರೋವರ್ ಸ್ಕೌಟ್ ಲೀಡರ್ ಮುಂದುವರೆದ ತರಬೇತಿ ಶಿಬಿರ



ರೇಂಜರ್ ಲೀಡರ್ ಲೀಡರ್ ಮೂಲ ತರಬೇತಿ ಶಿಬಿರ



ರೇಂಜರ್ ಲೀಡರ್ ಲೀಡರ್ ಮುಂದುವರೆದ ತರಬೇತಿ ಶಿಬಿರ

## ಶ್ರೀ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ

ರೋವರ್ ಸ್ಕೌಟ್ ಲೀಡರ್ ಮೂಲ ತರಬೇತಿ ಶಿಬಿರದಲ್ಲಿ 23 ಶಿಬಿರಾರ್ಥಿಗಳು ಭಾಗವಹಿಸಿದ್ದು, ಶ್ರೀ ಎಮ್. ಗಣಪತಿ, ಎಲ್.ಟಿ (ರೋ) ಶಿಬಿರದ ನಾಯಕರಾಗಿದ್ದರು. ಮುಂದುವರೆದ ತರಬೇತಿ ಶಿಬಿರದಲ್ಲಿ 7 ಶಿಬಿರಾರ್ಥಿಗಳು ಭಾಗವಹಿಸಿದ್ದು, ಶ್ರೀ ರಾಜೇಶ್ ಎ.ವಿ, ಎ.ಎಲ್ (ರೋ) ಶಿಬಿರದ ನಾಯಕರಾಗಿದ್ದರು.

ರೇಂಜರ್ ಲೀಡರ್ ಮೂಲ ತರಬೇತಿ ಶಿಬಿರದಲ್ಲಿ 19 ಶಿಬಿರಾರ್ಥಿಗಳು ಭಾಗವಹಿಸಿದ್ದು. ಶ್ರೀಮತಿ ಅನ್ನಪೂರ್ಣ ಕುರಬೆಟ್ಟು ಪ್ರಿ–ಎ.ಎಲ್.ಟಿ (ರೇ) ಶಿಬಿರ ನಡೆಸಿಕೊಟ್ಟರು. ಮುಂದುವರೆದ ತರಬೇತಿ ಶಿಬಿರದಲ್ಲಿ 7 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಎರಡೂ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿ ರೋವರಿಂಗ್ ಮತ್ತು ರೇಂಜರಿಂಗ್ ತರಬೇತಿ ಮಹತ್ವದ ಬಗ್ಗೆ ಹಾಗೂ ತರಬೇತುದಾರರು ಮತ್ತು ಶಿಬಿರಾರ್ಥಿಗಳು ಮಾಡಬೇಕಾದ ಕರ್ತವ್ಯಗಳ ಬಗ್ಗೆ ತಿಳಿಸಿ, ಯುವಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಲು ಕರೆ ನೀಡಿದರು. ಎರಡೂ ತರಬೇತಿ ಕೇಂದ್ರಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸಿ.ಎಸ್ ರೆಡ್ಡಿ, ರಾಜ್ಯ ಆಯುಕ್ತರು (ವ.ಸಂ.), ಎಲ್.ಟಿ (ಎಸ್) ಭೇಟಿ ನೀಡಿದರು.

ಸೆಪ್ಟೆಂಬರ್ 30 ರಂದು ಸರ್ವಧರ್ಮ ಪ್ರಾರ್ಥನೆಯನ್ನು ನಡೆಸಲಾಯಿತು. ಮೇಲ್ಕಂಡ ತರಬೇತಿಗಳ ಸಂಘಟನೆಯ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ನಾಗೇಶ್ ಆರ್. ಶಿವಪೂರ್, ಎಲ್.ಟಿ(ಸ್ಕೌ), ಎಸ್.ಟಿ.ಸಿ(ಸ್ಕೌ) ಮತ್ತು ಶ್ರೀಮತಿ ಕೆ.ವಿ. ಶಾಮಲ, ಎಲ್.ಟಿ(ಗೈ), ಎಸ್.ಟಿ.ಸಿ(ಗೈ) ರವರು ವಹಿಸಿದ್ದರು.



ರೋವರ್ ಸ್ಕೌಟ್ ಲೀಡರ್ ಮೂಲ ತರಬೇತಿ ಶಿಬಿರ



ರೋವರ್ ಸ್ಕೌಟ್ ಲೀಡರ್ ಮುಂದುವರೆದ ತರಬೇತಿ ಶಿಬಿರ



ರೇಂಜರ್ ಲೀಡರ್ ಲೀಡರ್ ಮೂಲ ತರಬೇತಿ ಶಿಬಿರ



ರೇಂಜರ್ ಲೀಡರ್ ಲೀಡರ್ ಮುಂದುವರೆದ ತರಬೇತಿ ಶಿಬಿರ

# ಜೋಟಾ–ಜೋಟಿ






ಅಕ್ಟೋಬರ್ 19 ಮತ್ತು 20ರಂದು ರಾಜ್ಯ ಕೇಂದ್ರ ಕಚೇರಿ ಆವರಣದಲ್ಲಿ ಬೆಂಗಳೂರು ಅಮೆಚೂರ್ ರೇಡಿಯೋ ಕ್ಲಬ್ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಸಹಯೋಗದೊಂದಿಗೆ 'ಜೋಟಾ ಮತ್ತು ಜೋಟಿ' ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಅಮೆಚೂರ್ ರೇಡಿಯೋ ಕ್ಲಬ್‌ನ ಸದ್ಯಸರಾದ ಶ್ರೀ ಮೋಹನ್, ಶ್ರೀ ಆಚಾರ್, ಶ್ರೀ ಗುರುಪ್ರಸಾದ್, ರಾಜ್ಯ ಸಂಸ್ಥೆ ಪದಾಧಿಕಾರಿಗಳು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಬೆಂಗಳೂರು ದಕ್ಷಿಣ ಜಿಲ್ಲೆಯಿಂದ 70 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದರು.



ರಾಜ್ಯ ಸಂಸ್ಥೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆ ವತಿಯಿಂದ ಬೆಂಗಳೂರು ಅಮೆಚೂರು ರೇಡಿಯೊ ಕ್ಲಬ್ ನವರ ಸಹಕಾರದಲ್ಲಿ Jamboree Online Air ಕಾರ್ಯಕ್ರಮವನ್ನು ಡಾ. ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರದಲ್ಲಿ ಅಕ್ಟೋಬರ್ 19 ರಿಂದ 20ರ ವರೆಗೆ ಸಂಘಟಿಸಲಾಯಿತು. ರಾಜ್ಯದ 16 ಜಿಲ್ಲೆಗಳಿಂದ 158 ರೋವರ್–ರೇಂಜರ್ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರು ಅಮೆಚೂರು ರೇಡಿಯೊ ಕ್ಲಬ್‌ನ ಶ್ರೀ ರಘುನಾಥ, ಶ್ರೀ ರಾಜೇಶ್, ಶ್ರೀ ಪ್ರಮೋದ್, ಶ್ರೀ ರೇಣು ಇವರುಗಳು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದರು. ಶ್ರೀ ನಂದಕುಮಾರ್ ಶಿಬಿರದ ನಾಯಕರಾಗಿ ಕಾರ್ಯನಿರ್ವಹಿಸಿದರು. ಡಾ ಶಿವಪ್ಪ, ಶ್ರೀ ನಾಗರಾಜ್ ಜಿಲ್ಲಾ ಮುಖ್ಯ ಆಯುಕ್ತರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಶ್ರೀ ವೆಂಕಟರಾಜ್ ಎಡಿಸಿ(ಸ್ಕೌ), ಶ್ರೀ ಶಿವಕುಮಾರ್, ಶ್ರೀ ನಿಹಾಲ್ ಇವರುಗಳು ಶಿಬಿರದ ಯಶಸ್ವಿಗೆ ಸಹಕರಿಸಿದರು.



ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಸ್ಥಳೀಯ ಸಂಸ್ಥೆ ಮತ್ತು ಸಂತ ಫಿಲೋಮಿನಾ ಪದವಿ. ಪೂರ್ವ ಕಾಲೇಜಿನಲ್ಲಿ ಅಕ್ಟೋಬರ್ 20 ರಂದು ಫಿಲೋಮಿನಾ ಪದವಿ ಪೂರ್ವ ಕಾಲೇಜಿನಲ್ಲಿ ಜೋಟಾ (JOTA) ಕಾರ್ಯಕ್ರಮವನ್ನು ಸಂಘಟಿಸಲಾಯಿತು. ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಕಾಲೇಜು

ಪ್ರಾಂಶುಪಾಲರಾದ ರೆ॥ಫಾ॥ ಅಶೋಕ ರಾಯನ್ ಗ್ರಾಸ್ತ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಶ್ರೀಧರ್ ರೈ, ಸಹಾಯಕ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಭರತ್ ರಾಜ್ ಎ.ಎಸ್.ಒ.ಸಿ(ಸ್ಕೌ), ಶ್ರೀ ಸಾಯಿಕುಮಾರ್ ಮಹಂತೇಶ್ ಮತ್ತು ಮಂಜುನಾಥ ಕುರಿ ಇವರುಗಳು ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀಮತಿ ಸುನೀತಾ ಎಂ.ಜಿಲ್ಲಾ ಸಂಘಟನಾ ಆಯುಕ್ತರು(ಗೈ), ಸ್ವಾಗತಿಸಿದರು. ಉಪನ್ಯಾಸಕರಾದ ಶ್ರೀ ಶರತ್ ಆಳ್ವ ಕಾರ್ಯಕ್ರಮ ನಿರೂಪಿಸಿದರು. ರೋವರ್ ಸ್ಕೌಟ್ ಲೀಡರ್ ಶ್ರೀ ಚಂದ್ರಕ್ಷ ವಂದಿಸಿದರು.



ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯಲ್ಲಿ ಅಕ್ಟೋಬರ್ 19 ಮತ್ತು 20 ರಂದು ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ, ಮಂಗಳೂರು. ಇಲ್ಲಿ ಮಂಗಳೂರಿನ ಅಮೆಚೂರು ರೇಡಿಯೋ ಕ್ಲಬ್ ಸಹಕಾರದಲ್ಲಿ ಜಾಂಬೂರಿ ಆನ್ ದಿ ಏರ್ (JOTA) ಕಾರ್ಯಕ್ರಮವನ್ನು ಸಂಘಟಿಸಲಾಯಿತು. ಹಿರಿಯ ಸ್ಕೌಟರ್ ಶ್ರೀ ಗೋಕುಲ್ ಭಟ್ ಹಾಗೂ ಶ್ರೀ ಮಹೇಶ್, ಶ್ರೀ ಗುರುದತ್ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಸಹಕಾರಿಸಿದರು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳಾದ ಶ್ರೀ ವಸಂತ್‌ರಾವ್, ಶ್ರೀ ಶ್ರೀನಿವಾಸ್‌ಕಿಣಿ, ಶ್ರೀ ಬಿ.ಎಂ ತುಂಬೆ, ಶ್ರೀ ಪ್ರತಿಮಕುಮಾರ್ ಭಾಗವಹಿಸಿದ್ದರು, ವಿವಿಧ ಶಾಲೆಗಳ ಸ್ಕೌಟರ್, ಗೈಡರ್ ಹಾಗೂ ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು.



ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ಅಕ್ಟೋಬರ್ 20 ರಂದು ಜೋಟಾ–ಜೋಟಿ ಕಾರ್ಯಕ್ರಮವನ್ನು ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್–ಗೈಡ್ಸ್ ಭವನ ಮೈಸೂರುನಲ್ಲಿ ಸಂಘಟಸಲಾಯಿತು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಪಿ. ವಿಶ್ವನಾಥ ಶಿಬಿರವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಅಬ್ದುಲ್ ಜಮೀಲ್ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ಅಜಯ್ ಕುಮಾರ್ ಜೈನ್ ಜಿಲ್ಲಾ ಆಯುಕ್ತರು (ವಯಸ್ಕ ಸಂಪನ್ಮೂಲ), ಶ್ರೀ ಸುಶ್ರುತ್ ಎಂ.ವಿ. ಜಮದಗ್ನಿ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಕ್ರಮ ಸಂಘಟಿಸಿದ್ದರು. ಒಟ್ಟು 112 ಸ್ಕೌಟ್ಸ್ –ಗೈಡ್ಸ್ ರೋವರ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.




ಉಡುಪಿ ಜಿಲ್ಲಾ ತರಬೇತಿ ಕೇಂದ್ರ ಪ್ರಗತಿನಗರದಲ್ಲಿ ಅಕ್ಟೋಬರ್ 19 ರಂದು ಮಂಗಳೂರು ಅಮೆಚೂರು ರೇಡಿಯೊ ಕ್ಲಬ್ ಶ್ರೀ ಶ್ರೀಕಾಂತ್ ಭಟ್ ಅವರ ಸಹಕಾರದಲ್ಲಿ ಜಂಬೂರಿ ಆನ್ ದಿ ಏರ್ ಕಾರ್ಯಕ್ರಮ ಸಂಘಟಿಸಲಾಯಿತು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ.ಇಂದ್ರಣಿ ಜಯಕರ್ ಶೆಟ್ಟಿ ಇವರು ಉದ್ಘಾಟಿಸಿದ್ದರು.

## ಸಂಘಟಕರುಗಳಿಗೆ ತರಬೇತಿ

ಸೆಪ್ಟೆಂಬರ್ 27 ರಂದು ರಾಜ್ಯ ಸಂಸ್ಥೆಯ ವತಿಯಿಂದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲಾ ಎ.ಎಸ್.ಒ.ಸಿ, ಡಿ.ಒ.ಟಿ, ಡಿ.ಒ, ಎಸ್.ಜಿ.ವಿ ಹಾಗೂ ಎಸ್.ಜಿ.ಎ.ಗಳ ಸಭೆಯನ್ನು ಆಯೋಜಿಸಲಾಗಿತ್ತು.

ಸಭೆಯಲ್ಲಿ ಗಣತಿ, ಒ.ವೈ.ಎಂ.ಎಸ್, ಶಾಲಾ– ಕಾಲೇಜುಗಳ ಭೇಟಿ, ಕಾರ್ಯಕ್ರಮ ಮತ್ತು ತರಬೇತಿಗಳ ಆಯೋಜನೆ ಮತ್ತು ನಿಯೋಜನೆ, ಪರೀಕ್ಷಾ ಶಿಬಿರಗಳು, ಸೇವಾ ಕಾರ್ಯಕ್ರಮ ಹಾಗೂ ರಾಜ್ಯ ಮಟ್ಟದ ಶಿಬಿರಗಳಿಗೆ ನಿಯೋಜನೆಯ ಕುರಿತು ಚರ್ಚಿಸಲಾಯಿತು ಮತ್ತು ಇನ್ನೂ ಉತ್ತಮವಾಗಿ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸಲಾಯಿತು.

ಸೆಪ್ಟೆಂಬರ್ 28 ಮತ್ತು 29 ರಂದು ಜೈನ್ ವಿಶ್ವವಿದ್ಯಾನಿಲಯ, ವಿ.ವಿ. ಪುರಂನ ಕಂಪ್ಯೂಟರ್ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ರಾಜ್ಯದ ಎಲ್ಲಾ ಎ.ಎಸ್.ಒ.ಸಿ, ಡಿ.ಒ.ಟಿ, ಡಿ.ಒ, ಎಸ್.ಜಿ.ವಿ ಹಾಗೂ ಎಸ್.ಜಿ.ಎ.ಗಳಿಗೆ ಕಂಪ್ಯೂಟರ್ ತರಬೇತಿಯ ಸಮಾರೋಪ ಸಮಾರಂಭದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮಾತನಾಡಿದರು.



ಈ ಸಂದರ್ಭದಲ್ಲಿ ಶ್ರೀ ಎಂ.ಎಸ್. ಸಂತೋಷ್, Joint Registrar, ಜೈನ್ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ರಾಜ್ಯ ಕೇಂದ್ರ ಸ್ಥಾನಿಕ ಆಯುಕ್ತರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ತರಬೇತಿ ನೀಡಿದ ಶ್ರೀ ಆಕಾಶ್ ಪಾಟೀಲ್ ರವರಿಗೆ ಗೌರವಿಸಿ, ಸನ್ಮಾನಿಸಲಾಯಿತು.



# ರಾಜ್ಯಪುರಸ್ಕಾರ ಪರೀಕ್ಷಾ ಶಿಬಿರಗಳ ವರದಿ

ರಾಜ್ಯ ಸಂಸ್ಥೆಯ ವತಿಯಿಂದ ಅಕ್ಟೋಬರ್ 17 ರಿಂದ 20ರ ವರೆಗೆ 2023–24ನೇ ಸಾಲಿನ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್ ಮತ್ತು ಗೈಡ್ಸ್ ಪರೀಕ್ಷಾ ಶಿಬಿರಗಳನ್ನು ಆಯೋಜಿಸಲಾಗಿತ್ತು. ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ದಿನಾಂಕ | ಸ್ಥಳ | ಸ್ಕೌಟ್ ವಿಭಾಗ | | ಗೈಡ್ ವಿಭಾಗ | |
|---|---|---|---|---|---|---|
| | | | ನಾಯಕರು | ಸ್ಕೌಟ್ಸ್ ಸಂಖ್ಯೆ | ನಾಯಕಿಯರು | ಗೈಡ್ಸ್ ಸಂಖ್ಯೆ |
| 1 | 17 ರಿಂದ 20.10.2024 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ & ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಶ್ರೀ ಕೆ.ಜಿ. ಗೋಪಾಲಕೃಷ್ಣ | 210 | ಶ್ರೀಮತಿ ಅರುಣಮಾಲ | 230 |
| 2 | 17 ರಿಂದ 20.10.2024 | ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ & ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ | ಶ್ರೀ ವಿದ್ಯಾಧರ ಕುಟನಿ | 329 | ಶ್ರೀಮತಿ ಕಾತ್ಯಾಯಿನಿ ಸಿ.ಎಸ್ | 300 |
| 3 | 17 ರಿಂದ 20.10.2024 | ಸ್ಕೌಟ್ಸ್ ಮತ್ತು ಗೈಡ್ಸ್ ಕನ್ನಡ ಭವನ ಮೂಡಬಿದಿರೆ, ದಕ್ಷಿಣ ಕನ್ನಡ ಜಿಲ್ಲೆ | ಶ್ರೀ ಬಿ.ವಿ. ಪಾಟೀಲ್ | 124 | ಡಾ॥ ಶಬಾನಾ | 184 |
| 4 | 17 ರಿಂದ 20.10.2024 | ಡಾ॥ ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರ, ಪ್ರಗತಿನಗರ, ಉಡುಪಿ ಜಿಲ್ಲೆ. | ಶ್ರೀ ಪರಮೇಶ್ವರ | 92 | ಶ್ರೀಮತಿ ರಾಧಿಕಾ | 106 |
| 5 | 17 ರಿಂದ 20.10.2024 | ಮೊರಾರ್ಜಿ ದೇಸಾಯಿ ವಸತಿ ಶಾಲೆ ಆಶಾಪುರ ರಸ್ತೆ, ರಾಯಚೂರು ಜಿಲ್ಲೆ | ಡಾ॥ ಭರಶೆಟ್ಟಿ | 166 | ಶ್ರೀಮತಿ ಸರೋಜಾ | 230 |
| 6 | 17 ರಿಂದ 20.10.2024 | ಗುಲ್ಬರ್ಗಾ ವಿಶ್ವ ವಿದ್ಯಾಲಯ, ಕಲಬುರಗಿ | ಶ್ರೀ ಜಗದೀಶ್ ಬೊಳಸೂರ್ | 123 | ಶ್ರೀಮತಿ ಜಯಶೀಲಾ | 141 |
| | | | ಒಟ್ಟು | 1044 | 1191 | |




ದೊಡ್ಡಬಳ್ಳಾಪುರ




ಕೊಂಡಜ್ಜಿ





ದಕ್ಷಿಣ ಕನ್ನಡ





ಉಡುಪಿ





ರಾಯಚೂರು



ಕಲಬುರಗಿ

ಬಳ್ಳಾರಿ ಜಿಲ್ಲಾ ಸಂಸ್ಥೆ ಜಿಂದಾಲ್ ಆದರ್ಶ ವಿದ್ಯಾಲಯ ತೋರಣಗಲ್ ಇವರ ಸಂಯುಕ್ತ ಆಶ್ರಯದಲ್ಲಿ ಅಕ್ಟೋಬರ್ 26 ರಿಂದ 27ರ ವರೆಗೆ ರಾಜ್ಯ ಪುರಸ್ಕಾರ ಪದಕ ಪರೀಕ್ಷಾ ಶಿಬಿರ ನಡೆಯಿತು.

ಶ್ರೀ ಕುಮಾರಸ್ವಾಮಿ ಬಳಗಾರ, ಜಿಂದಾಲ್ ಆದರ್ಶ ವಿದ್ಯಾಲಯದ ಪ್ರಾಚಾರ್ಯರು ಮಾನ್ಯರು ಶಿಬಿರವನ್ನು ಉದ್ಘಾಟಿಸಿ ಮಾತನಾಡಿ ಸ್ಕೌಟ್ಸ್ ಗೈಡ್ಸ್‌ಗಳಿಗೆ ಶುಭ ಕೋರಿದರು. ಸ್ಕೌಟ್ಸ್ ವಿಭಾಗಕ್ಕೆ ನಾಯಕರಾಗಿ ಶ್ರೀ ಪ್ರಭಾಕರ್ ದಾಸರ್, ಗೈಡ್ಸ್ ವಿಭಾಗಕ್ಕೆ ನಾಯಕರಾಗಿ ಶ್ರೀಮತಿ ಮಲ್ಲೇಶ್ವರಿ ಜುಜಾರಿ ಕಾರ್ಯನಿರ್ವಹಿಸಿದರು.





# ದಸರ ಸೇವಾ ಕಾರ್ಯಕ್ರಮ

**ಮೈಸೂರು:** ವಿಶ್ವವಿಖ್ಯಾತಿ ಮೈಸೂರು ದಸರಾ ಮಹೋತ್ಸವದಲ್ಲಿ ಮೈಸೂರು ಜಿಲ್ಲಾ ಸಂಸ್ಥೆಯ ಸ್ಕೌಟ್ಸ್, ಗೈಡ್ಸ್ ರೋವರ್ಸ್, ರೇಂಜರ್ಸ್‌ಗಳು ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಸೇವೆ ಸಲ್ಲಿಸಿರುತ್ತಾರೆ, ಉಚಿತವಾಗಿ ನೀರು ಹಂಚುವ ಕಾರ್ಯಕ್ರಮ, ಮಕ್ಕಳ ದಸರಾ, ಪಂಜಿನ ಕವಾಯಿತು, ಯೋಗ ದಸರಾ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸೇವೆಯನ್ನು ಸಲ್ಲಿಸಿರುತ್ತಾರೆ. ಈ ಕಾರ್ಯಕ್ರಮಗಳಲ್ಲಿ 250ಕ್ಕೂ ಅಧಿಕ ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಉತ್ಸಾಹದಿಂದ ಭಾಗವಹಿಸಿರುತ್ತಾರೆ.





**ಉಡುಪಿ:** ಉಡುಪಿ ಜಿಲ್ಲೆಯ ಉಚ್ಚಿಲ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ನಡೆದ ದಸರಾ ಉತ್ಸವವು ಅಕ್ಟೋಬರ್ 03 ರಿಂದ 12ರ ವರೆಗೆ ಉಡುಪಿ ಜಿಲ್ಲೆಯ ವಿವಿಧ ಕಾಲೇಜುಗಳ 650 ರೋವರ್ – ರೇಂಜರ್‌ಗಳು ಸೇವೆ ಸಲ್ಲಿಸಿರುತ್ತಾರೆ.

**ಮಂಗಳೂರು:** ಶ್ರೀ ಗೋಕರ್ಣನಾಥೇಶ್ವರ ದೇವಸ್ಥಾನ ಕುದ್ರೋಳ್ಳಿ, ಮಂಗಳೂರಿನಲ್ಲಿ ನಡೆದ ಮಂಗಳೂರು ದಸರಾ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ರೋವರ್ಸ್-ರೇಂಜರ್ಸ್ ಸೇವೆ ಸಲ್ಲಿಸಿದ್ದರು.





## ಶ್ರೀ ಹಾಸನಾಂಬಾದೇವಿ ದೇವಸ್ಥಾನದಲ್ಲಿ ಸೇವಾ ಶಿಬಿರ

ಅಕ್ಟೋಬರ್ 24 ರಿಂದ ನವೆಂಬರ್ 03ರ ವರೆಗೆ ಹಾಸನದ ಅಧಿದೇವತೆ ಶ್ರೀ ಹಾಸನಾಂಬಾದೇವಿ ಹಾಗೂ ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ರಾಜ್ಯ ಸಂಸ್ಥೆ ಹಾಗೂ ಹಾಸನ ಜಿಲ್ಲಾ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಸೇವಾ ಶಿಬಿರದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳು ಸೇವೆ ಸಲ್ಲಿಸುತ್ತಿರುವುದು.









# ಕನ್ನಡ ರಾಜ್ಯೋತ್ಸವ
## (ನಮ್ಮ ನಾಡಹಬ್ಬ)

**J. Suryanarayan**
Scout Master & HoD (English Dept.)
Maruthi Vidyalaya, CISCE,
HoramavuAgara, Bangalore – 560043

ನವೆಂಬರ್ 01 ಪ್ರತಿಯೊಬ್ಬ ಕನ್ನಡಿಗನಿಗೆ ಮಹತ್ತರವಾದ ದಿನ. ಕರ್ನಾಟಕದ ಇತಿಹಾಸದ ಮಹತ್ವವನ್ನು, ಕನ್ನಡಿಗರ ಪ್ರಾಮುಖ್ಯತೆಯನ್ನು ಮತ್ತು ಕನ್ನಡ ಭಾಷೆಯ ಗೌರವವನ್ನು ಹಿರಿದಾಗಿ ಜಗತ್ತಿಗೆ ತೋರಿಸುವ ದಿನ.

1950ರಲ್ಲಿ ಭಾರತವು ಗಣರಾಜ್ಯವಾಯಿತು. ಆ ಬಳಿಕ ನಿರ್ದಿಷ್ಟ ಪ್ರದೇಶದಲ್ಲಿ ಮಾತನಾಡುವ ಭಾಷೆಯ ಆಧಾರದ ಮೇಲೆ ದೇಶದಲ್ಲಿ ವಿವಿಧ ರಾಜ್ಯಗಳು ರಚನೆಯಾಗಲು ಆರಂಭವಾಯಿತು. ಅಂತೆಯೇ 1956ರ ನವೆಂಬರ್ 01 ರಂದು ವಿವಿಧ ಪ್ರದೇಶಗಳಲ್ಲಿ ಕನ್ನಡ ಮಾತನಾಡುತ್ತಿದ್ದ ಜನರನ್ನು ಒಗ್ಗೂಡಿಸಿ ಮೈಸೂರು ರಾಜ್ಯ ರಚನೆಯಾಯಿತು.

1973 ರಂದು ಮೈಸೂರು ಹೆಸರನ್ನು 'ಕರ್ನಾಟಕ' ಎಂದು ಬದಲಾಯಿಸಲಾಯಿತು. ಈ ಮಹತ್ವದ ನಿರ್ಧಾರ ತೆಗೆದುಕೊಳ್ಳುವಾಗ ಶ್ರೀ ದೇವರಾಜ ಅರಸ್ ರಾಜ್ಯ ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕದ ಏಕೀಕರಣಕ್ಕೆ ಮನ್ನಣೆ ನೀಡಿದ ಇತರ ಮಹನೀಯರುಗಳಲ್ಲಿ, ಸಾಹಿತಿಗಳಾದ ಕೆ. ಶಿವರಾಮ ಕಾರಂತ್, ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎನ್. ಕೃಷ್ಣರಾವ್ ಮತ್ತು ಬಿ.ಎಂ. ಶ್ರೀಕಂಠಯ್ಯ ರವರು ಸೇರಿದ್ದಾರೆ. ಹೊಸದಾಗಿ ರೂಪುಗೊಂಡಾಗ ಒಟ್ಟು 19 ಜಿಲ್ಲೆಗಳಿದ್ದ ಕರ್ನಾಟಕದಲ್ಲಿ ಈಗ 31 ಜಿಲ್ಲೆಗಳಿವೆ. ನಮ್ಮ ರಾಷ್ಟ್ರಕವಿ ಕುವೆಂಪು ರವರು, 1930ರಲ್ಲಿ ರಚಿಸಿದ ಅದ್ಭುತವಾದ 'ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಗೀತೆಯನ್ನು ಜನವರಿ 6, 2004 ರಂದು ನಾಡಗೀತೆಯನ್ನಾಗಿ ಅಳವಡಿಸಿಕೊಳ್ಳಲಾಯಿತು. ಕರ್ನಾಟಕ ರಾಜ್ಯಕ್ಕೆ ಪ್ರತ್ಯೇಕ ಧ್ವಜವಿದೆ. ಅದು ಹಳದಿ ಮತ್ತು ಕೆಂಪು ಬಣ್ಣದಿಂದ ಕೂಡಿದೆ. ಕನ್ನಡ ಹೋರಾಟಗಾರ ಎಂ. ರಾಮಮೂರ್ತಿ ಅವರು ಈ ಧ್ವಜವನ್ನು ಸಿದ್ದಪಡಿಸಿದರು. ಹಳದಿ ಬಣ್ಣವು ಶಾಂತಿ ಮತ್ತು ಸೌಹಾರ್ದತೆ ಹಾಗೂ ಕೆಂಪು ಬಣ್ಣ ಕ್ರಾಂತಿಯ ಸಂಕೇತವಾಗಿದೆ.

ಕರ್ನಾಟಕ ನಿಜಕ್ಕೂ ಧರ್ಮ, ಭಾಷೆ, ಸಂಸ್ಕೃತಿಗಳ ಸಮನ್ವಯದ ಪುಣ್ಯಭೂಮಿ. ಇಲ್ಲಿ ವಿವಿಧ ಧರ್ಮ, ಭಾಷೆ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಜನರು ಪರಸ್ಪರ ಗೌರವದಿಂದ, ಪ್ರೀತಿ ಮತ್ತು ಸೌಹಾರ್ಧತೆಯಿಂದ ಜೀವನ ಸಾಗಿಸುತ್ತಿದ್ದಾರೆ. ಈ ಸಹಾನುಭೂತಿ, ಬಾಂಧವ್ಯ ಮತ್ತು ಸಹಬಾಳ್ವೆಯ ಮೌಲ್ಯಗಳಿಂದ ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟ ಎಂದು ಕರೆಯಲಾಗಿದೆ. ಪ್ರತಿಯೊಬ್ಬ ಕನ್ನಡಿಗನಿಗೂ ಇದು ಹೆಮ್ಮೆಯ ಸಂಗತಿ.

ಇಂದಿನ ಕಾಲಘಟ್ಟದಲ್ಲಿ ನಮ್ಮ ಜಲ, ನೆಲ ಮತ್ತು ಭಾಷೆಯ ಉಳಿವಿನ ಮಹತ್ವವನ್ನು ಅರಿತು, ನಮ್ಮ ಕೃತ್ಯಗಳಲ್ಲಿ ತೋರಿಸಬೇಕಾಗದ ಅಗತ್ಯವಿದೆ.  ಕನ್ನಡದ ಪರಂಪರೆ, ಭಾಷೆಯ ಸೊಗಸನ್ನು ಮುಂದಿನ ತಲೆಮಾರಿಗೆ ಪೂರೈಸುವುದು ನಮ್ಮ ಹೊಣೆ.  ಕೇವಲ ಮಾತುಗಳಲ್ಲ, ನಮ್ಮ ನಿತ್ಯ ಜೀವನದಲ್ಲಿ ಕನ್ನಡ ಬಳಕೆ, ಕನ್ನಡ ಸಾಹಿತ್ಯ ಓದುವುದು, ಮಕ್ಕಳಿಗೆ ಕನ್ನಡ ಕಲಿಸುವುದು ಸೇರಿದಂತೆ ಎಲ್ಲ ಮಟ್ಟಗಳಲ್ಲಿ ಕನ್ನಡದ ಆಸ್ಮಿತೆಯನ್ನು ಕಟ್ಟಿಕೊಂಡು ಹೋಗೋಣ.

"ಜೈ ಕರ್ನಾಟಕ ಮಾತೆ, ಜೈ ತಾಯಿ ಭುವನೇಶ್ವರಿ.....
ಸಿರಿ ಕನ್ನಡಂಗಳ್ಗೆ, ಸಿರಿಗನ್ನಡಂ ಬಾಳ್ಗೆ.....!"

# ರತನ್ ಟಾಟಾ



ದೇಶದ ಕೈಗಾರಿಕೋದ್ಯಮಕ್ಕೆ ಅಭಿವೃದ್ಧಿಯ ದಿಕ್ಸೂಚಿಯನ್ನು ನೀಡಿದ್ದ ಹೆಸರಾಂತ ಕೈಗಾರಿಕೋದ್ಯಮಿ ರತನ್ ಟಾಟಾ ಅವರು ಅಕ್ಟೋಬರ್ 9 ರಂದು ನಮ್ಮನ್ನಗಲಿದ್ದಾರೆ. ಅವರ ನಿಧನಕ್ಕೆ ರಾಜ್ಯ ಸಂಸ್ಥೆ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಶ್ರೀ ರತನ್ ಟಾಟಾ ಅವರು ತಮ್ಮ ಜೀವನದಲ್ಲಿ ಟಾಟಾ ಗ್ರೂಪ್ ಸಂಸ್ಥೆಗಳಿಗಷ್ಟೇ ಅಲ್ಲ, ಭಾರತದ ಆರ್ಥಿಕ ಪ್ರಗತಿಗೂ ದೊಡ್ಡ ಕೊಡುಗೆ ನೀಡಿದವರು. ದೇಶದ ಸರ್ವತೋಮುಖ ಅಭಿವೃದ್ಧಿಗೆ ಯುವಶಕ್ತಿಯ ಮಹತ್ವವನ್ನು ಗುರುತಿಸಿ, ಅವರ ಪ್ರತಿಭೆಗೆ ಉತ್ತೇಜನ ನೀಡಲು ಟಾಟಾ ಸಂಸ್ಥೆಯ ಮೂಲಕ ಹಲವು ಪ್ರಮುಖ ಯೋಜನೆಗಳನ್ನು ರೂಪಿಸಿದ್ದರು. ಹೊಸತೊಂದು ಕಲಿಕೆ, ಆಲೋಚನೆಗಳ ಮೂಲಕ ಯುವಕರಿಗೆ ಅಗ್ರಸ್ಥಾನದಲ್ಲಿ ಶಿಕ್ಷಣ, ತರಬೇತಿ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸುವ ಉದ್ದೇಶದಿಂದ, ಉನ್ನತ ಶಿಕ್ಷಣಕೆ ಧನಸಹಾಯ, ವಿದ್ಯಾರ್ಥಿವೇತನ ಯೋಜನೆ, ಸಂಶೋಧನೆ ಮತ್ತು ಸವೋದ್ಯಮಕ್ಕೆ ಪ್ರೋತ್ಸಾಹ ಇಂತಹ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡವರು. ಜೀವನದುದ್ದಕ್ಕೂ ಸರಳತೆ ಮೆರೆದರು. ನೈತಿಕ ಮೌಲ್ಯಗಳಿಗೆ ಪ್ರಾಮುಖ್ಯತೆ ನೀಡಿದರು. ಸದಾಸಕ್ತಿಯ ಭಾವನೆ, ಸಾಮಾಜಿಕ ಸೇವೆಯ ಮೇಲಿನ ನಂಬಿಕೆಯನ್ನು ಹೊಂದಿದ್ದರು. ಅವರ ನಿಧನದಿಂದ ದೇಶವು ಕಾಯಕ ಯೋಗಿಯೊಬ್ಬರನ್ನು ಕಳೆದುಕೊಂಡಂತಾಗಿದೆ. ರಾಜ್ಯ ಸಂಸ್ಥೆಯ ಪರವಾಗಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

# ಅ ಭಿ ನಂ ದ ನೆ ಗ ಳು





ಸೆಪ್ಟೆಂಬರ್ 30, 2024 ರಂದು **ಶ್ರೀ ಕೆ. ಬಸವರಾಜ್** ರಾಜ್ಯ ಪರಿಷತ್ ಸದಸ್ಯರು, ಭಾರತ್ ಸ್ಕೌಟ್ಸ್–ಗೈಡ್ಸ್ ಚಿತ್ರದುರ್ಗ ಇವರು ಚಿತ್ರದುರ್ಗ ತಾಲ್ಲೂಕು ಮಲ್ಲಾಪುರ ಕೆರೆಯ ಬದಿಯಲ್ಲಿ ಹೋಗುತ್ತಿರುವಾಗ, ಕೆರೆಯ ಹಿನ್ನೀರಿನಲ್ಲಿ ಮೀನು ಹಿಡಿಯಲು ತೆರಳಿದ್ದ ಇಬ್ಬರು ವ್ಯಕ್ತಿಗಳು ಕೆರೆಯ ನೀರಿನ ಮಧ್ಯ ಬಳ್ಳಿಗಳಲ್ಲಿ ಸಿಲುಕಿಕೊಂಡಿದ್ದನ್ನು ನೋಡಿ ಸಮಯಪ್ರಜ್ಞೆ ಇಂದ ಅಗ್ನಿಶಾಮಕ ರಕ್ಷಣಾ ಸಿಬ್ಬಂದಿ ವರ್ಗಕ್ಕೆ ಕರೆ ಮಾಡಿ, ಆ ಎರಡು ವ್ಯಕ್ತಿಗಳ ಜೀವ ಉಳಿಯಲು ಸಹಾಯ ಮಾಡಿದ್ದಕ್ಕಾಗಿ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಠಾಣೆ ವತಿಯಿಂದ ಇವರಿಗೆ ಸನ್ಮಾನಿಸಿ ಅಭಿನಂದನೆಯನ್ನು ಸಲ್ಲಿಸಿರುತ್ತಾರೆ.

ಅಕ್ಟೋಬರ್ 01 ರಂದು ಕರ್ನಾಟಕ ರಾಜ್ಯ ಪವರ್ ಲಿಫ್ಟರ್ಸ್ ಅಸೋಸಿಯೇಷನ್ ದಾವಣಗೆರೆ ವತಿಯಿಂದ ಬೆಂಗಳೂರಿನ ಬಿಜಿಎಸ್ ಆಟದ ಮೈದಾನ ಕಾಂಗರು ಆಸ್ಪತ್ರೆ, ವಿಜಯನಗರ ಇಲ್ಲಿ ಆಯೋಜಿಸಿದ್ದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ದಾವಣಗೆರೆ ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೇಂಜರ್ **ಕುಮಾರಿ ಸಹನ ಎ.ಕೆ. ರವರು** ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದಿದ್ದು ಹಾಗೂ ಬೆಸ್ಟ್ ಲಿಫ್ಟರ್ ಆಫ್ ಕರ್ನಾಟಕ ಆವಾರ್ಡ್ ಅನ್ನು ಪಡೆದಿರುತ್ತಾರೆ.



ಸೆಪ್ಟೆಂಬರ್ 17 ರಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಮಹಾನಗರ ಪಾಲಿಕೆಯ ಆರೋಗ್ಯ ವಿಭಾಗವು ಜುಲೈ 2024 ರಂದು ನಾಗರಿಕ ಹಾಗೂ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ರಾಜ್ಯಮಟ್ಟದ ಬೆಂಗಳೂರು ಡೆಂಗ್ಯೂ ವಾರಿಯರ್ ಸ್ಪರ್ಧೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳಲ್ಕೆರೆಯ. ಚಿನ್ಮೂಲಾದ್ರಿ ರೋವರ್ಸ್ ಘಟಕಕ್ಕೆ ದ್ವಿತೀಯ ಸ್ಥಾನ ಪ್ರಶಸ್ತಿ ದೊರೆತಿರುತ್ತದೆ. ಈ ಪ್ರಶಸ್ತಿಯನ್ನು ಶ್ರೀ ಸುರಳ್ಕರ್ ವಿಕಾಸ್ ಕಿಶೋರ್, ಐ.ಎ.ಎಸ್. ವಿಶೇಷ ಆಯುಕ್ತರು ಬಿ.ಬಿ.ಎಂ.ಸಿ. ಆರೋಗ್ಯ ವಿಭಾಗ ಇವರು ವಿತರಣೆ ಮಾಡಿದರು. ಪ್ರಶಸ್ತಿಯು ರೂ. 25,000 ರೂಪಾಯಿಗಳ ಗಿಫ್ಟ್ ವೋಚರ್ ಅನ್ನು ಒಳಗೊಂಡಿರುತ್ತದೆ. ಪ್ರಶಸ್ತಿ ವಿಜೇತರುಗಳು ಶ್ರೀ ದೇವರಾಜ ಎ.ವಿ., ಆರ್.ಎಸ್.ಎಲ್. ಹಾಗೂ ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳಲ್ಕೆರೆ ಮತ್ತು ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು.



ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ತುಮಕೂರಿನಲ್ಲಿ ಪದವಿ ಮುಗಿಸಿ ರಾಜ್ಯ ಪುರಸ್ಕಾರ ಪ್ರಶಸ್ತಿ ಪಡೆದಿರುವ **ಕುಮಾರಿ ವಿದ್ಯಾಶ್ರೀ ಕೆ. ಎಲ್.** ಇವರಿಗೆ 2024–25 ಸಾಲಿನಲ್ಲಿ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಕೋಟಾದಡಿಯಲ್ಲಿ ಎಂ.ಕಾಂ (ಇನ್ಫಾರ್ಮಶನ್ ಸಿಸ್ಟಮ್) ಸ್ನಾತಕೋತ್ತರ ಪದವಿಯ ಪ್ರವೇಶ ಪಡೆದುಕೊಂಡಿರುತ್ತಾರೆ.



ಚಿತ್ರದುರ್ಗ ಜಿಲ್ಲಾ ಸಂಸ್ಥೆ ಸರ್ಕಾರಿ ಕಲಾ ಕಾಲೇಜ್ (ಸ್ವಯತ್ತಾ) ಚಿತ್ರದುರ್ಗದಲ್ಲಿ ಪದವಿ ಮುಗಿಸಿ RSL ಮೂಲ ತರಬೇತಿ ಮುಗಿಸಿರುವ **ಕುಮಾರ ಚಿದಾನಂದ ಐ.** ಇವರಿಗೆ 2024–25ನೇ ಸಾಲಿನಲ್ಲಿ ಪ್ರಥಮ ಬಾರಿಗೆ ದಾವಣಗೆರೆ ವಿಶ್ವ ವಿದ್ಯಾನಿಲಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಕೋಟಾದಲ್ಲಿ ಎಂ.ಎ., ರಾಜ್ಯಶಾಸ್ತ್ರ ವಿಭಾಗ ಸ್ನಾತಕೋತ್ತರ ಪದವಿಯ ಅರ್ಹತೆ ಪಡೆದು ಕೊಂಡಿರುತ್ತಾರೆ.

ಇವರುಗಳಿಗೆ ರಾಜ್ಯ ಸಂಸ್ಥೆಯ ವತಿಯಿಂದ ಅಭಿನಂದನೆಗಳು.

–ರಾಜ್ಯ ಕಾರ್ಯದರ್ಶಿ



# ಜಿಲ್ಲಾ ವಾರ್ತೆಗಳು

## ಬಿ.ಬಿ.ಎಂ.ಪಿ.

* ಕರ್ನಾಟಕ ಸರ್ಕಾರ ಮತ್ತು ಬಿಬಿಎಂಪಿ ಸಹ ಯೋಗದಲ್ಲಿ ಹಮ್ಮಿಕೊಂಡಿದ್ದ 155ನೇ ಗಾಂಧಿ ಜಯಂತಿ ಹಾಗೂ ಸ್ವಚ್ಛತಾ ಆಂದೋಲನ ಪ್ರತಿಜ್ಞಾವಿಧಿ ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ ಮಂತ್ರಿಮಂಡಲದ ಶಾಸಕರು ಹಾಗೂ ಬಿಬಿಎಂಪಿ ಇಲಾಖೆಗಳ ಎಲ್ಲಾ ವಿಶೇಷ ಆಯುಕ್ತರು, ಜಂಟಿ ಆಯುಕ್ತರುಗಳು ಮತ್ತು ಬಿಬಿಎಂಪಿ ಶಿಕ್ಷಣ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು, ಸಹಾಯಕ ಆಯುಕ್ತರು, ಸಿಬ್ಬಂದಿ ವರ್ಗದವರು ಮತ್ತು ಬಿಬಿಎಂಪಿ ಶಾಲಾ ಕಾಲೇಜುಗಳಿಂದ ಭಾಗವಹಿಸಿದ್ದ ಸ್ಕೌಟ್-ಗೈಡ್ಸ್ ದಳನಾಯಕರುಗಳು 200 ಹೆಚ್ಚು ರೋವರ್, ರೇಂಜರ್ಸ್‌ಗಳು ಗಾಂಧಿಭವನದಿಂದ ವಿಧಾನ ಸೌಧದ ಮಹಾತ್ಮ ಗಾಂಧಿ ಪ್ರತಿಮೆ ತನಕ ಹಮ್ಮಿಕೊಂಡಿದ್ದ ಪಥಸಂಚಲನ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯರವರಿಂದ ಸ್ವಚ್ಛತಾ ಆಂದೋಲನದ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಲಾಯಿತು.



## ಬೆಳಗಾವಿ

* ಸೆಪ್ಟೆಂಬರ್ 21 ರಂದು ಬಿ.ಇ.ಓ. ಶ್ರೀ ಜಿ.ಬಿ. ಬಳಗಾರ ಇವರ ಮಾರ್ಗದರ್ಶನದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಸ್ಥಳೀಯ ಸಂಸ್ಥೆ ಗೋಕಾಕ ಇವರ ಸಹ ಯೋಗದಲ್ಲಿ ತಾಲ್ಲೂಕು ಮಟ್ಟದ ದೇಶಭಕ್ತಿ ಗೀತ ಗಾಯನ ಕಾರ್ಯಕ್ರಮವು ನಗರದ ಎಕ್ಸ್ ಮುನ್ಸಿಪಲ್ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢ ಶಾಲಾ ವಿಭಾಗದ ಸಭಾ ಭವನದಲ್ಲಿ ಜರುಗಿತು. ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀ ಬಿ.ಬಿ. ಕುಲಕರ್ಣಿ ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.



ಶ್ರೀ ಬಿ.ಆರ್. ಅಶೋಕ ದಳವಾಯಿ, ಶ್ರೀಮತಿ. ಚವಲಗಿ, ರೋವರ್ ಸ್ಕೌಟ್ ಲೀಡರ್ ಶ್ರೀ ವಿ.ಎ. ಸಾತಪುತೆ ಉಪಸ್ಥಿತರಿದ್ದರು. ಸಮನ್ವಯಾಧಿಕಾರಿಗಳು ಮಾತನಾಡಿ "ಸ್ಕೌಟ್-ಗೈಡ್ಸ್ ಶಿಕ್ಷಣವು ಮಕ್ಕಳಿಗೆ ಒಳ್ಳೆಯ ಮೌಲ್ಯಗಳನ್ನು ಕೊಡುತ್ತದೆ. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ" ಎಂದು ಹೇಳಿದರು. ನಂತರ ಸಮಾರೋಪ ಸಮಾರಂಭದಲ್ಲಿ ಆದರ್ಶ ವಿದ್ಯಾಲಯ ಖನಗಾಂವ ಮುಖ್ಯೋಪಾಧ್ಯಾಯರು ಹಾಗೂ ಸಹಾಯಕ ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಶ್ರೀ ಎಂ.ಬಿ. ಪಾಟೀಲ ಇವರು ಆಗಮಿಸಿದ್ದರು. ನಿರ್ಣಾಯಕರಾಗಿ ಶ್ರೀ ಎಸ್.ಎಚ್. ಹೂಲಿ, ಶ್ರೀ. ಸಿ.ಎಚ್. ಹೂಲಿ, ಶ್ರೀ ಸಿ.ಸಿ. ಶೀಗಿಹಳ್ಳಿ ಕಾರ್ಯನಿರ್ವಹಿಸಿದರು. ವಿವಿಧ ಶಾಲೆಗಳಿಂದ 120 ಕಬ್ ಬುಲ್‌ಬುಲ್, ಸ್ಕೌಟ್-ಗೈಡ್ಸ್ ಮಕ್ಕಳು.

* ಅಕ್ಟೋಬರ್ 01 ರಂದು ಗೋಕಾಕ ತಾಲ್ಲೂಕಿನ ಖನಗಾಂವ ಗ್ರಾಮದ ಸರಕಾರಿ ಆದರ್ಶ ವಿದ್ಯಾಲಯದಲ್ಲಿ ಶಾಲೆಯ ಮುಖ್ಯಾಧ್ಯಾಪಕರು ಹಾಗೂ ಸಹಾಯಕ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಎಂ.ಬಿ. ಪಾಟೀಲ ಇವರ ಮಾರ್ಗದರ್ಶನದಲ್ಲಿ ಸ್ಕೌಟ್-ಗೈಡ್ಸ್‌ಗಳಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಮಾಡಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳನ್ನು ಉದ್ದೇಶಿಸಿ ಮುಖ್ಯಾಧ್ಯಾಪಕರು ಮಾತನಾಡಿ "ಸ್ಕೌಟ್ಸ್-ಗೈಡ್ಸ್ ಚಳುವಳಿಯು ಜೀವನದಲ್ಲಿ ಶಿಸ್ತು ಬೆಳೆಸಿಕೊಳ್ಳಲು ಸಹಕಾರಿ. ಅಲ್ಲದೆ ಮಕ್ಕಳಿಗೆ ಮುಂದಿನ ಭವಿಷ್ಯ ನಿರ್ಮಿಸಿಕೊಳ್ಳಲು ಸಹಕಾರಿಯಾಗಿದೆ" ಎಂದು ಹೇಳಿದರು. ಕಾರ್ಯಾಗಾರದಲ್ಲಿ 25 ಸ್ಕೌಟ್ಸ್‌ಗಳು, 33 ಗೈಡ್ಸ್‌ಗಳು ಮತ್ತು ಸ್ಕೌಟ್ಸ್ ಮಾಸ್ಟರ್ ಶ್ರೀ ಶಾಂತಿನಾಥ ಇಂಚಲ ಭಾಗವಹಿಸಿದ್ದರು.



ಅಕ್ಟೋಬರ್ 23 ರಂದು ಕಿತ್ತೂರು ಉತ್ಸವ ಹಾಗೂ ಚೆನ್ನಮ್ಮಾಜಿಯ 200ನೇ ವಿಜಯೋತ್ಸವ ಕಾರ್ಯಕ್ರಮ ಜರಗಿತು. ಪ್ರಾರಂಭದಲ್ಲಿ ಲೋಕೋಪಯೋಗಿ ಇಲಾಖೆ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸತೀಶ ಲಕ್ಷ್ಮಣರಾವ್ ಜಾರಕಿಹೊಳಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರ ಮತ್ತು ಶಾಸಕರಾದ ಶ್ರೀ ಬಾಬಾಸಾಹೇಬ ಪಾಟೀಲ ಚೆನ್ನಮ್ಮಾಜಿಯವರ ಪುತ್ಥಳಿಗೆ ಪುಷ್ಪಾರ್ಪಣೆ ಮಾಡುವುದರ ಮೂಲಕ ಉತ್ಸವಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಉಪ ನಿರ್ದೇಶಕರು ಶಿಕ್ಷಣ ಇಲಾಖೆ ಬೆಳಗಾವಿ ದಕ್ಷಿಣ ಶ್ರೀಮತಿ ಲೀಲಾವತಿ ಎಸ್. ಹಿರೇಮಠ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಚನ್ನಮ್ಮನ ಕಿತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಸಿ.ವೈ. ತುಬಾಕದ ಉಪಸ್ಥಿತರಿದ್ದರು. ನಂತರ ವಾಹನಗಳ ಮೂಲಕ ವಿವಿಧ ರೂಪಕಗಳ ಮೆರವಣಿಗೆ ನಡೆಯಿತು ಈ ರೂಪಕಗಳಲ್ಲಿ ಸ್ಕೌಟ್ ಮತ್ತು ಗೈಡ್ ಸಂಸ್ಥೆಯ ವತಿಯಿಂದ ರೂಪಕವನ್ನು ಮಾಡಲಾಯಿತು. ರೂಪಕಗಳು ಚೆನ್ನಮ್ಮ ವೃತ್ತದಿಂದ ಉತ್ಸವದ ವೇದಿಕೆಯವರೆಗೆ ನಡೆದವು. ಸದರಿ ಕಾರ್ಯಕ್ರಮದಲ್ಲಿ ವಿವಿಧ ಶಾಲಾ ಕಾಲೇಜುಗಳಿಂದ 500ಕ್ಕೂ ಹೆಚ್ಚು ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.

## ಬೆಂಗಳೂರು ದಕ್ಷಿಣ

* ಸೆಪ್ಟೆಂಬರ್ 21 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಪಾಠ ಶಾಲೆ, ವಿನ್ಹಾನ್ ನಗರ ಇಲ್ಲಿ ಅಂತರಾಷ್ಟ್ರೀಯ ಶಾಂತಿ ದಿನಾಚರಣೆಯ ಅಂಗವಾಗಿ ಶಾಂತಿ ಜಾಥವನ್ನು ಆಯೋಜಿಸಲಾಯಿತು. ಶಾಂತಿ ಜಾಥದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಾಲೆಯ ಎಸ್.ಡಿ.ಎಂ.ಸಿ.ಯ ಸದ್ಯಸರು, ದಳ ನಾಯಕರುಗಳು, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದರು.




* ಅಕ್ಟೋಬರ್ 02 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಯ ವತಿಯಿಂದ ದಳಗಳ ಮಟ್ಟದಲ್ಲಿ ಶಾಲೆಗಳ ಸುತ್ತಲು ಸ್ವಚ್ಛತಾ ಮಾಡುವ ಮುಖಾಂತರ ಮತ್ತು ಸರ್ವಧರ್ಮ ಪ್ರಾರ್ಥನೆ ಮಾಡುವ ಮುಂಖಾಂತರ ಗಾಂಧಿ ಜಯಂತಿಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲರು, ಆಡಳಿತ ಮಂಡಲಿಯವರು, ದಳನಾಯಕರುಗಳು, ಕಬ್ಸ್, ಬುಲ್-ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದರು.



* ಅಕ್ಟೋಬರ್ 18 ರಿಂದ 20ರ ವರಗೆ ಬೆಂಗಳೂರು ಅಂತರಾಷ್ಟ್ರೀಯ ಅಕಾಡೆಮಿ ಶಾಲೆಯಲ್ಲಿ ಜಯನಗರ ಸ್ಥಳಿಯ ಸಂಸ್ಥೆಯ ವತಿಯಿಂದ ಕಬ್, ಬುಲ್-ಬುಲ್, ಸ್ಕೌಟ್ಸ್-ಗೈಡ್ಸ್‌ಗಳಿಗೆ ದ್ವಿತೀಯ ಸೋಪಾನ, ದ್ವಿತಿಯ ಚರಣ್ ಮತ್ತು ರಜತ್ ಪಂಕ್ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶ್ರೀ ಟಿ.ಕೆ ನಾರಾಯಣಸ್ವಾಮಿ, ಎಲ್.ಟಿ, ಜಿಲ್ಲಾ ತರಬೇತಿ ಸ್ಕೌಟ್ಸ್ ಆಯುಕ್ತರು, ಸ್ಕೌಟ್ಸ್ ವಿಭಾಗದ ಮತ್ತು ಶ್ರೀಮತಿ ಜಯಲಕ್ಷ್ಮಿ, ಎ.ಎಲ್.ಟಿ (ಗೈ) ಗೈಡ್ ವಿಭಾಗದ ನಾಯಕತ್ವ ವಹಿಸಿದ್ದರು. ಶ್ರೀಮತಿ ಗಾಯತ್ರಿಗೌಡ ಎಲ್.ಟಿ (ಗೈ), ಶ್ರೀಮತಿ ಪೃಥ್ವಿ ಸಿಂಧ್ಯಾ, ಎ.ಡಿಸಿ (ಗೈ), ಶ್ರೀಮತಿ ರೇಖಾ, ಎ.ಎಲ್.ಟಿ (ಗೈ) ಪರೀಕ್ಷಾ ಶಿಬಿರಕ್ಕೆ ಭೇಟಿ ನೀಡಿದರು. ಪರೀಕ್ಷಾ ಶಿಬಿರಕ್ಕೆ ಬೆಂಗಳೂರು ಅಂತರಾಷ್ಟ್ರೀಯ ಅಕಾಡೆಮಿ ಶಾಲೆಯ ಚೇರ್‌ಮನ್ ರಾದ ಡಾ॥ ಮುನಿರಾಜು ರವರು, ಡಾ॥ ಅರೋಗ್ಯರಾಜ್, ಎ.ಡಿ.ಸಿ (ಸ್ಕೌ) ಮತ್ತು ಶಾಲೆಯ ಪ್ರಾಂಶುಪಾಲರು, ಶಾಲೆಯ ದಳನಾಕರುಗಳು ಹೆಚ್ಚಿನ ಸಹಕಾರವನ್ನು ನೀಡಿದ್ದಾರೆ. ಈ ಶಿಬಿರದಲ್ಲಿ 57 ಸ್ಕೌಟ್ಸ್, 46 ಗೈಡ್ಸ್, 18 ಕಬ್, 19 ಬುಲ್-ಬುಲ್ಸ್ ಮತ್ತು 15 ದಳನಾಯಕ-ನಾಯಕಿಯರು ಒಟ್ಟು 155 ಶಿಬಿರಾರ್ಥಿಗಳು ಭಾಗವಹಿಸಿದರು.



## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲೆ ಹಾಗೂ ಸರಕಾರಿ ಕಲಾ ಕಾಲೇಜು ಬೆಂಗಳೂರು ಇವರ ಜಂಟಿ ಆಶ್ರಯದಲ್ಲಿ ಜಿಲ್ಲಾ ಮಟ್ಟದ ರೋವರ್-ರೇಂಜರ್ ಮೇಟ್ ಶಿಬಿರವು ಸೆಪ್ಟೆಂಬರ್ 30 ಮತ್ತು ಅಕ್ಟೋಬರ್ 01 ರಂದು ಕಲಾ ಕಾಲೇಜು ಬೆಂಗಳೂರು ಇಲ್ಲಿ ನಡೆಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬಿ.ಅರ್ ಪ್ರಸನ್ನಕುಮಾರ್ ಗಿಡಕ್ಕೆ ನೀರು ಎರೆಯುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನು ಸ್ವಾಗತಿಸಿದರು. ಶ್ರೀ ಆನಂದ ರೋವರ್ ಸ್ಕೌಟ್ ಲೀಡರ್ ಇವರು ಕಾರ್ಯಕ್ರಮದ ಮಹತ್ವವನ್ನು ತಿಳಿಸಿದರು. ಶ್ರೀ ಪಿ.ಟಿ. ಶ್ರೀನಿವಾಸ್ ನಾಯಕ್, ಪ್ರಾಂಶುಪಾಲರು ಸರಕಾರಿ ಕಲಾ ಕಾಲೇಜು ಬೆಂಗಳೂರು ಇವರು ಅಧ್ಯಕ್ಷತೆ ವಹಿಸಿ ಶುಭಾಶಯ ಕೋರಿದರು. ಶಿಬಿರದ ನಾಯಕ ಶ್ರೀ ವಿತೇಶ್ ಕಾಂಚಾನ್ ಶಿಬಿರದ ಕಾರ್ಯಕ್ರಮದ ವೇಳಾ ಪಟ್ಟಿಯನ್ನು ತಿಳಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ರೋವರ್ ಬಸವರಾಜ್ ನೇವೆರಿಸಿದರು. ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಶ್ರೀ ಬಿ.ಕೆ. ಶೇಷಾದ್ರಿ ಜಿಲ್ಲಾ ಕಾರ್ಯದರ್ಶಿ ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಆನಂದ, ರೋವರ್ ಸ್ಕೌಟ್ ಲೀಡರ್ ಇವರು ಶಿಬಿರದ ವರದಿ ನೀಡಿದರು, ಮುಖ್ಯ ಅತಿಥಿಯಾಗಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಮುಖ್ಯ ಆಯುಕ್ತರು ಡಾ. ಪ್ರಸನ್ನ ಕುಮಾರ್ ಉಪಸ್ಥಿತರಿದ್ದರು. ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಶ್ರೀ ಹೇಮಂತ್ ಕುಮಾರ್ ಇವರು ರೋವರ್-ರೇಂಜರ್ ಮೇಟ್ ಶಿಬಿರದ ಬಗ್ಗೆ ತಿಳಿಸಿದರು. ಶ್ರೀ ಪಿ.ಟಿ. ಶ್ರೀನಿವಾಸ್ ನಾಯಕ್ ಪ್ರಾಂಶುಪಾಲರು ಸರಕಾರಿ ಕಲಾ ಕಾಲೇಜು ಬೆಂಗಳೂರು ಶಿಬಿರಕ್ಕೆ ಆಗಮಿಸಿದ ಎಲ್ಲರಿಗೂ ಅಭಿನಂದನೆ ತಿಳಿಸಿದರು.




* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ ಅಕ್ಟೋಬರ್ 17 ರಂದು ಗಂಟಿಗಾನಹಳ್ಳಿಯಲ್ಲಿ, ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಸುಮಾರು 500 ಗಿಡಗಳ ಬುಡದಲ್ಲಿ ಬೆಳೆದಕಳೆಗಳನ್ನು ಸ್ವಚ್ಛತೆ ಮಾಡಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 79 ರೋವರ್-ರೇಂಜರ್ ಭಾಗವಹಿಸಿದ್ದರು.

ಗಾಂಧಿ ಜಯಂತಿ ಪ್ರಯುಕ್ತ ಬೆಂಗಳೂರು ಉತ್ತರ ಜಿಲ್ಲೆಯ ಸ್ಕೌಟ್ಸ್-ಗೈಡ್ಸ್ ಕಬ್-ಬುಲ್‌ಬುಲ್ ದಳಗಳಿಂದ ಸ್ವಚ್ಛತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



## ಬೀದರ್

* ಭಾರತ್ ಸ್ಕೌಟ್ಸ್–ಗೈಡ್ಸ್ ಜಗತ್ತಿನ ಒಂದು ಶಿಸ್ತಿನ ಸಂಸ್ಥೆಯಾಗಿದ್ದು, ರಾಜ್ಯದ ಮುಕುಟಪ್ರಾಯ ಗಡಿ ಜಿಲ್ಲೆ ಬೀದರ್‌ನಲ್ಲಿ ಒಂದು ಸುಸಜ್ಜಿತ ಹಾಗೂ ಮಾದರಿ ಪ್ರಾಯ ಕಟ್ಟಡ ನಿರ್ಮಾಣಕ್ಕೆ ಎಲ್ಲರು ಸಹಕರಿಸುವಂತೆ ಸ್ಕೌಟ್ಸ್–ಗೈಡ್ಸ್ ಜಿಲ್ಲಾ ನೂತನ ಉಪಾಧ್ಯಕ್ಷೆ ಪ್ರೊ. ಲೀಲಾವತಿ ಚಕೋತೆ ಹೇಳಿದರು. ಇತ್ತೀಚೆಗೆ ಎಫ್.ಪಿ.ಎ.ಐ. ಕಚೇರಿ ಆವರಣದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ವಿಶೇಷ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. "ವೈದ್ಯ ಲೋಕದ ಸಂತ ದಿ॥ ಡಾ. ಎಸ್.ಎಸ್. ಸಿದ್ದಾರೆಡ್ಡಿ ಅವರ ಧರ್ಮಪತ್ನಿ ಡಾ. ಎಸ್.ಎಸ್. ಸಿದ್ಧಾರೆಡ್ಡಿ ಫೌಂಡೇಷನ್ ಗೌರವಾಧ್ಯಕ್ಷೆ ಡಾ. ಗುರಮ್ಮ ಸಿದ್ಧಾರೆಡ್ಡಿ ಅವರು ಭಾರತ್ ಸ್ಕೌಟ್ಸ್–ಗೈಡ್ಸ್ ಸಂಸ್ಥೆಗೆ ಎರಡು ನಿವೇಶನಗಳನ್ನು ಉದಾರವಾಗಿ ದೇಣಿಗೆ ನೀಡಿರುವುದು ಪ್ರಶಂಸನಾರ್ಹ ಸಂಗತಿ. ಡಾ. ಗುರಮ್ಮ ಅವರ ಪ್ರಯತ್ನದಿಂದಾಗಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ವತಿಯಿಂದ ಎರಡು ಕೋಟಿ ಅನುದಾನ ಮಂಜೂರಾಗಿದ್ದು, ಮುಂಗಡವಾಗಿ ಈಗಾಗಲೇ ಒಂದು ಕೋಟಿ ಬಿಡುಗಡೆ ಆಗಿ ಕೆಲಸ ಸಹ ಶುರುವಾಗಿದೆ. ಇಡೀ ರಾಜ್ಯದಲ್ಲಿ ಮಾದರಿ ಕಟ್ಟಡ ನಿರ್ಮಾಣಕ್ಕೆ ಸಂಕಲ್ಪ ಮಾಡಿದ್ದು, ಸರ್ವರು ಸಹಕರಿಸಬೇಕು ಎಂದು ಹೇಳಿದರು. ಭಾರತ್ ಸ್ಕೌಟ್ಸ್–ಗೈಡ್ಸ್ ಜಿಲ್ಲಾ ಮುಖ್ಯ ಆಯುಕ್ತೆ ಡಾ. ಗುರಮ್ಮ ಸಿದ್ದಾರೆಡ್ಡಿ ಮಾತನಾಡಿ, "ದಿ॥ ಡಾ. ಎಸ್.ಎಸ್. ಸಿದ್ದಾರೆಡ್ಡಿ ಅವರು ತಮ್ಮ ಜೀವಿತದ ಅವಧಿಯಲ್ಲಿ ಸ್ಕೌಟ್ಸ್–ಗೈಡ್ಸ್ ಮೂಲಕ ಹಲವು ಜನಪರ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದರು" ಎಂದು ತಿಳಿಸಿದರು. ಸ್ಕೌಟ್ಸ್–ಗೈಡ್ಸ್ ಜಿಲ್ಲಾ ಸಂಘಟನಾ ಶಿಕ್ಷಕಿ ಶ್ರೀಮತಿ ಸುಜಾತಾ ಪೂಜಾರಿ ಸ್ವಾಗತಿಸಿದರು. ಇದೇ ವೇಳೆ ನೂತನ ಜಿಲ್ಲಾ ಉಪಾಧ್ಯಕ್ಷೆ ಶ್ರೀಮತಿ ಮಂಗಲಾ ಭಾಗವತ ಹಾಗೂ ಸಹಾಯಕ ಆಯುಕ್ತೆ ಡಾ. ಸುಜಾತಾ ಹೊಸಮುನಿ ಹಾಗೂ ಇವರರಿಗೆ ವಾರೆಂಟ್ (ಆದೇಶ ಪತ್ರ) ಪತ್ರಗಳನ್ನು ವಿತರಿಸಲಾಯಿತು. ಸ್ಕೌಟ್ಸ್–ಗೈಡ್ಸ್ ಜಿಲ್ಲಾ ಸಹ ಕಾರ್ಯದರ್ಶಿ ಶ್ರೀ ರಾಚಯ್ಯ ನಾಶಿ ವಂದನೆ ಸಲ್ಲಿಸಿದರು.



## ಚಿಕ್ಕಮಗಳೂರು

* ಸೆಪ್ಟೆಂಬರ್ 18 ರಂದು ಜಿಲ್ಲಾಮಟ್ಟದ ದೇಶಭಕ್ತಿ ಗೀತ ಗಾಯನ ಸ್ಪರ್ಧೆಯನ್ನು ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು, ಶ್ರೀ ಎಂ.ಎನ್. ಷಡಕ್ಷರಿ, ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು, ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ತಾಲ್ಲೂಕು ದೈಹಿಕ ಪರಿವೀಕ್ಷಕರಾದ ಶ್ರೀ ಶೇರ್ ಆಲಿ ಹಾಗೂ ತಾಲ್ಲೂಕು ಶಿಕ್ಷಣ ಸಂಯೋಜಕರು ಶ್ರೀ ವೀರೇಶ್ ಕೌಲಗಿರವರು ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಂಗೀತ ಶಿಕ್ಷಕರುಗಳಾದ ಶ್ರೀಮತಿ ಪದ್ಮಶ್ರೀ, ಶ್ರೀಮತಿ ಪವಿತ್ರ ದೀಪಕ್, ಶ್ರೀಮತಿ ಶೋಭಾ ಪರಮೇಶ್ವರ ಶ್ರೀಮತಿ ಜ್ಯೋತಿ ರಮೇಶ್‌ರವರುಗಳು ತೀರ್ಪುಗಾರರಾಗಿ ಆಗಮಿಸಿದ್ದರು.



## ಚಿಕ್ಕಬಳ್ಳಾಪುರ

* ಸೆಪ್ಟೆಂಬರ್ 20 ರಿಂದ 21ರ ವರೆಗೆ ಸರ್ಕಾರಿ ಪ್ರಥಮದರ್ಜೆ ಕಾಲೇಜು ಶಿಡ್ಲಘಟ್ಟ ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಜಿಲ್ಲಾ ಮಟ್ಟದ ರೋವರ್ಸ್–ರೇಂಜರ್ಸ್ ನಿಪುಣ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ 22 ರೋವರ್ಸ್, 5 ರೇಂಜರ್ಸ್‌ಗಳು ಭಾಗವಹಿಸಿದ್ದರು. ಶಿಬಿರವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ವೆಂಕಟೇಶ್‌ರವರು ಉದ್ಘಾಟಿಸಿದರು ಮತ್ತು ಶಿಬಿರದ ಯಶಸ್ಸಿಗೆ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಂಸ್ಥೆ ಕೋಶಾಧಿಕಾರಿ ಡಾ. ಮುರಳಿ ಆನಂದ್‌ರವರು ವಹಿಸಿದ್ದರು. ಶಿಬಿರಾಗ್ನಿ ಕಾರ್ಯಕ್ರಮವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರಕಾಶ್ ಸಿ.ಬಿ.ರವರು ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.



* ಸೆಪ್ಟೆಂಬರ್ 21 ರಂದು ಅಂತರಾಷ್ಟ್ರೀಯ ಶಾಂತಿ ದಿನಾಚರಣೆ ಆಚರಿಸಲಾಯಿತು. ಶಿಡ್ಲಘಟ್ಟ ಪ್ರಮುಖ ರಸ್ತೆಗಳಲ್ಲಿ ಜಾಥ ಮಾಡಲಾಯಿತು. ಕಾಲೇಜಿನ ಆವರಣ ಸ್ವಚ್ಛತೆ ಮಾಡಲಾಯಿತ್ತು. 50 ರೋವರ್ಸ್–ರೇಂಜರ್ಸ್ ಭಾಗವಹಿಸಿದ್ದರು.



* ಸೆಪ್ಟೆಂಬರ್ 30 ರಂದು ಪೋಷಣ್ ಅಭಿಯಾನ ಮತ್ತು ಫಲಪುಷ್ಪ ಪ್ರದರ್ಶನ ಕಾರ್ಯಕ್ರಮವನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಿರಿಯಣ್ಣನಹಳ್ಳಿ ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಗೈಡ್ ಕ್ಯಾಪ್ಟನ್ ಚಂದ್ರಕಲಾ ರವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಗೈಡ್ಸ್‌ಗಳು ಭಾಗವಹಿಸಿದ್ದರು.

* ಅಕ್ಟೋಬರ್ 01 ರಂದು ಗೌರಿಬಿದನೂರು ಸ್ಥಳೀಯ ಸಂಸ್ಥೆಯ ಸರ್ಕಾರಿ ಪ್ರೌಢಶಾಲೆ, ವಾಟದಹೊಸಹಳ್ಳಿ, ಇಲ್ಲಿ ನೂತನ ಸ್ಕೌಟ್ ಘಟಕ ಪ್ರಾರಂಭಿಸಲಾಯಿತು. ಘಟಕದ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕರು, ಸ್ಥಳಿಯ ಸಂಸ್ಥೆ ಕಾರ್ಯದರ್ಶಿ ಶ್ರೀ ಗಿರಿಧರ್, ಸ್ಕೌಟ್ ಮಾಸ್ಟರ್ ಶ್ರೀ ಕೆ. ವೆಂಕಟೇಶ್ ನಾಯ್ಕ ಹಾಗೂ ಶಾಲೆಯ ವಿವಿಧ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಅಕ್ಟೋಬರ್ 02 ರಂದು ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ಚಿಕ್ಕಬಳ್ಳಾಪುರ, ಬಿ.ಜಿ.ಎಸ್. ಶಾಲೆ ಆಗಲಗುರ್ಕಿ ಚಿಕ್ಕಬಳ್ಳಾಪುರ ಅವರ ಸಹಯೋಗದಲ್ಲಿ ಗಾಂಧೀ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತು. ಸ್ವಚ್ಚತಾ ಆಂದೋಲನಾ ನೆಡೆಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಶಾಲೆಯ ಮುಖ್ಯ ಶಿಕ್ಷಕರು, ಸಿಬ್ಬಂದಿ ವರ್ಗದವರೂ ಕಬ್, ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಅಕ್ಟೋಬರ್ 02 ರಂದು ಗಾಂಧೀ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀ ಜಯಂತಿ ಅಂಗವಾಗಿ ಸರ್ಕಾರಿ ಪ್ರೌಢಶಾಲೆ ಮೇಳ್ಯ ಗೌರಿಬಿದನೂರು ತಾಲ್ಲೂಕು ಇಲ್ಲಿ ಜಾಥ ಕಾರ್ಯಕ್ರಮ ಮತ್ತು ಸ್ವಚ್ಚತಾ ಆಂದೋಲನಾ ನಡೆಸಲಾಯಿತ್ತು.

* ಅಕ್ಟೋಬರ್ 02 ಗಾಂಧೀ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀ ಜಯಂತಿಯನ್ನು ಅರುಣೋದಯ ಶಾಲೆ, ಬಾಗೇಪಲ್ಲಿ, ಎನ್ ಹೆಚ್.ಪಿ.ಎಸ್

ಚಿಕ್ಕಬಲ್ಲಾಪುರ, ಸ.ಹಿ.ಪ್ರಾ.ಶಾಲೆ ನಂದಿ, ಚಿಕ್ಕಬಳ್ಳಾಪುರ, ಸ.ಹಿ.ಪ್ರಾ. ಶಾಲೆ ಹಿರಿಯಣ್ಣನಹಳ್ಳಿ, ಚಿಕ್ಕಬಳ್ಳಾಪುರ, ಸರ್ಕಾರಿ ಪ್ರೌಢ ಶಾಲೆ ಗೂಳೂರು ಬಾಗೇಪಲ್ಲಿ, ಅಂಬೇಡ್ಕರ್ ಶಾಲೆ, ಕೈವಾರ ಚಿಂತಾಮಣಿ, ಸ,ಹಿ,ಪ್ರಾ.ಶಾಲೆ, ಉಚ್ಚೋದ್ದನಹಳ್ಳಿ, ಗೌರಿಬಿದನೂರು, ಸರ್ಕಾರಿ ಪ್ರೌಢಶಾಲೆ, ದೊಡ್ಡ ಗಂಜೂರು, ಚಿಂತಾಮಣಿ, ಹಾಗೂ ಜಿಲ್ಲೆಯ ಮುತಾಂದ ಶಾಲೆಗಳಲ್ಲಿ ಸಂಘಟಿಸಲಾಗಿತ್ತು.

* ಅಕ್ಟೋಬರ್ 02 ರಂದು ಸರ್ಕಾರಿ ಪ್ರೌಢ ಶಾಲೆ ವಾಟದಹೊಸಹಳ್ಳಿಯಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್‌ಬಹದ್ದೂರ್ ಶಾಸ್ತ್ರಿ ಜಯಂತಿ ಅಂಗವಾಗಿ ಸ್ವಚ್ಛತಾ ಜಾಗೃತಿ ಜಾತಾ ಹಮ್ಮಿಕೊಳ್ಳಲಾಯಿತು ಮತ್ತು ಮುಖ್ಯ ಶಿಕ್ಷಕಿಯಾದ ಶ್ರೀಮತಿ ಪಾರ್ವತಮ್ಮ ಮತ್ತು ಶಾಲೆಯ ಶಿಕ್ಷಕರು ಹಾಗೂ ಸ್ಕೌಟ್ ಮಾಸ್ಟರ್ ಶ್ರೀ ಕೆ. ವೆಂಕಟೇಶ್ ನಾಯ್ಕರವರ ನೇತೃತ್ವದಲ್ಲಿ ಸ್ಕೌಟ್ ವಿದ್ಯಾರ್ಥಿಗಳಿಂದ ಬಸ್ ನಿಲ್ದಾಣ ಮತ್ತು ಜಗಳಿ ಕಟ್ಟೆ ಸ್ವಚ್ಛಗೊಳಿಸಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

* ಅಕ್ಟೋಬರ್ 07 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಸೇವೆ ಸಲ್ಲಿಸಿದ ರೋವರ್ಸ್–ರೇಂಜರ್ಸ್‌ಗಳಿಗೆ ಪ್ರಮಾಣ ಪತ್ರ ವಿತರಣಾ, ಸಮಾರಂಭ ಮತ್ತು ನೂತನವಾಗಿ ರೋವರ್ಸ್–ರೇಂಜರ್ಸ್ ಘಟಕಕ್ಕೆ ಸೇರಿರುವ ವಿದ್ಯಾರ್ಥಿಗಳಿಗೆ ಮಾಹಿತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ಶ್ರೀ ಹನುಮಂತಪ್ಪರವರು ವಹಿಸಿದ್ದರು. ಪ್ರಾಂಶುಪಾಲರಾದ ಶ್ರೀ ರಮೇಶ್ ಚಂದ್ರು ದತ್ತುರವರು ಕಾರ್ಯಕ್ರಮ ಉದ್ಘಾಟಿಸಿ ಶುಭಹಾರೈಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ವೈ.ಜಿ ಗಿರಿಧರ್ ಮತ್ತು ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ವಿ.,ರವರು  ಮಾಹಿತಿ ನೀಡಿದರು. ಜಿಲ್ಲಾ ಮತ್ತು ರಾಜ್ಯ ಸಂಸ್ಥೆಯ ಕಾರ್ಯಕ್ರಮಗಳು ಹಾಗೂ ವಿಶೇಷವಾಗಿ ಹಾಸನಾಂಬ ದೇವಿಯ ಜಾತ್ರೆ ಮಹೋತ್ಸವದ ಸೇವೆ ಶಿಬಿರದ ಬಗ್ಗೆ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ವೆಂಕಟೇಶ್ ನಾಯಕ್, ರೋವರ್ ಸ್ಕೌಟ್ ಲೀಡರ್ ಶ್ರೀ ಮಂಜುನಾಥ, ರೇಂಜರ್ ಲೀಡರ್ ಶ್ರೀಮತಿ ಶಾರದರವರು ಉಪಸ್ಥಿತರಿದ್ದರು. ಮಾಹಿತಿ ಕಾರ್ಯಕ್ರಮದಲ್ಲಿ 60 ರೇಂಜರ್ಸ್‌ಗಳು, 30 ರೋವರ್ಸ್‌ಗಳು ಭಾಗವಹಿಸಿದ್ದರು.



* ಗೌರಿಬಿದನೂರು ತಾಲ್ಲೂಕು ನಗರಗೆರೆ ಹೋಬಳಿ ವಾಟದ ಹೊಸಹಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಭಾರತ್ ಸ್ಕೌಟ್ಸ್–ಗೈಡ್ಸ್‌ನ ನೂತನ ಘಟಕವನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಸುನಿತಾ ಮಹೇಶ್, ಶಾಲಾ ಮುಖ್ಯ ಶಿಕ್ಷಕರು ಮತ್ತು ತಾಲ್ಲೂಕು ಸ್ಕೌಟ್ಸ್–ಗೈಡ್ಸ್‌ನ ಕಾರ್ಯದರ್ಶಿಗಳು ಗಿಡಕ್ಕೆ ನೀರು ಹಾಕುವುದರ ಮೂಲಕ ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕಿಯದರಾದ ಶ್ರೀಮತಿ ಪಾರ್ವತಮ್ಮ, ನೌಕರರ ಸಂಘದ ಕಾರ್ಯದರ್ಶಿಗಳಾದ ಶ್ರೀ ನರಸಿಂಹಮೂರ್ತಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ರಾಮಚಂದ್ರಪ್ಪ, ನಗರಗೆರೆ ಶಾಲೆಯ ಶಿಕ್ಷಕರಾದ ಶ್ರೀ ಶ್ರೀನಿವಾಸ್ ಹಾಗೂ ಶಾಲೆಯ ಎಲ್ಲಾ ಶಿಕ್ಷಕಿಯರು ಹಾಗೂ ವಿದ್ಯಾರ್ಥಿಯರು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



## ಚಿತ್ರದುರ್ಗ

* ಅಕ್ಟೋಬರ್ 05 ರಿಂದ 10ರ ವರೆಗೆ ಚಿತ್ರದುರ್ಗದ ಶ್ರೀ ಮುರುಘ ರಾಜೇಂದ್ರ ಬೃಹನ್ ಮಠದಲ್ಲಿ ಶ್ರೀ ಜಯದೇವ ಜಗದ್ಗುರು ಮಹಾಸ್ವಾಮಿಗಳ 150ನೇ ವರ್ಷದ ಶರಣ ಸಂಸ್ಕೃತಿ ಜಯಂತೋತ್ಸವವನ್ನು ನಡೆಸಲಾಯಿತು. ಈ ಜಯತೋತ್ಸವದಲ್ಲಿ ಮಹಾಸ್ವಾಮಿಗಳ ಆಹ್ವಾನದ ಮೇರೆಗೆ ಜಿಲ್ಲಾ ಸಂಸ್ಥೆಯ ಈ ಸೇವೆಗೆ 80 ರೋವರ್ಸ್ 20 ರೇಂಜರ್ಸ್‌ಗಳು ಹಾಗೂ ಆರ್.ಎಸ್.ಎಲ್. ಸ್ಕೌಟ್ಸ್ ಮಾಸ್ಟರ್, ಗೈಡ್ ಕ್ಯಾಪ್ಟನ್‌ಗಳು ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಈ ಸೇವಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



## ದಾವಣಗೆರೆ

* ಸೆಪ್ಟೆಂಬರ್ 13 ರಂದು ಜೈನ್ ವಿದ್ಯಾಲಯ ಶಾಲೆಯಲ್ಲಿ ಅಂತರ್ ರಾಷ್ಟ್ರೀಯ ಶಾಂತಿ ದಿನದ ಪ್ರಯುಕ್ತ ಚಟುವಟಿಕೆಯ ಭಾಗವಾಗಿ ಶ್ರೀ ವಿಜಯ್‌ಕುಮಾರ್, ಯುವ ಸಮಿತಿ ಸದಸ್ಯರು ಸ್ಕೌಟ್ ಮತ್ತು ಗೈಡ್ಸ್‌ಗಳಿಗೆ ಜಂಕ್ ಫುಡ್‌ಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಜಂಕ್ ಫುಡ್ ತಿನ್ನುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಪಿಪಿಟಿ ಮೂಲಕ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಶ್ರೀ ಹಾಲಪ್ಪ ಜಿಲ್ಲಾ ಸಹಾಯಕ ಆಯುಕ್ತರು ಭಾಗವಹಿಸಿ ಪೌಷ್ಟಿಕ ಆಹಾರವನ್ನು ತಿನ್ನಬೇಕೆಂದು ತಿಳಿಸಿದರು. ಶ್ರೀಮತಿ ಅಶ್ವಿನಿ.ಜೆ ಎಸ್.ಜಿ.ವಿ ಫುಡ್ ಕಲರಿಂಗ್ ಮತ್ತು ಟೇಸ್ಟಿಂಗ್ ಪೌಡರ್ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ಕೊಟ್ರ ಯ್ಯ ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ಮಂಜುಳ ಉಪಸ್ಥಿತರಿದ್ದರು.



* ಸೆಪ್ಟೆಂಬರ್ 14 ರಂದು ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ನೇತಾಜಿ ಓಪನ್ ಸ್ಕೌಟ್ ಗ್ರೂಪ್ ಮತ್ತು ಚೇತನ ಗೈಡ್ ಗ್ರೂಪ್ ವತಿಯಿಂದ ಸ್ಕೌಟ್–ಗೈಡ್‌ಗಳಿಗೆ ಶ್ರೀ ವಿಜಯ್‌ಕುಮಾರ್, ಯುವ ಸಮಿತಿ ಸದಸ್ಯರು, ಮೆಸೆಂಜರ್ ಆಫ್ ಪೀಸ್ ಚಟುವಟಿಕೆಯ ಬಗ್ಗೆ ಚಿತ್ರಕಲೆಯನ್ನು ಮಾಡಿಸಿದರು. ಶ್ರೀಮತಿ ಅಶ್ವಿನಿ. ಜೆ., ಎಸ್.ಜಿ.ವಿ, ಶ್ರೀ ಜೆ.ಎಸ್. ವಿಜಯ್, ಎಲ್.ಟಿ (ಸ್ಕೌಟ್) ದಕ್ಷಿಣ ವಲಯ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀಮತಿ ಕಾವೇರಿ ಪಿ., ಶ್ರೀಮತಿ ತೇಜಸ್ವಿನಿ ಸುರ್ವೆ ಗೈಡ್ ಕ್ಯಾಪ್ಟನ್ಸ್ ಶ್ರೀಮತಿ ದಿವ್ಯ ಲೇಡಿಕಬ್ ಮಾಸ್ಟರ್ ಉಪಸ್ಥಿತರಿದ್ದರು.

*ಸೆಪ್ಟೆಂಬರ್ 14 ರಂದು ವಿದ್ಯಾಸಾಗರ ಕಾನ್ವೆಂಟ್ ಶಾಲೆಯಲ್ಲಿ ಅಂತರ್‌ರಾಷ್ಟ್ರೀಯ ಶಾಂತಿ ದಿನದ ಪ್ರಯುಕ್ತ ಚಟುವಟಿಕೆಯ ಭಾಗವಾಗಿ ಶ್ರೀ ವಿಜಯ್‌ಕುಮಾರ್, ಯುವ ಸಮಿತಿ ಸದಸ್ಯರು ಸ್ಕೌಟ್ ಮತ್ತು ಗೈಡ್ಸ್‌ಗಳಿಗೆ ಜಂಕ್ ಫುಡ್‌ಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಜಂಕ್ ಫುಡ್ ತಿನ್ನುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಪಿಪಿಟಿ ಮೂಲಕ ಮಾಹಿತಿಯನ್ನು ನೀಡಿದರು. ಶ್ರೀಮತಿ ಅಶ್ವಿನಿ. ಜೆ., ಎಸ್.ಜಿ.ವಿ. ಫುಡ್



ಕಲರಿಂಗ್ ಮತ್ತು ಟೇಸ್ಟಿಂಗ್ ಪೌಡರ್ ಬಗ್ಗೆ ಮಾಹಿತಿ ನೀಡಿದರು. ಶ್ರೀಮತಿ ನಾಗರತ್ನ ಗೈಡ್ ಕ್ಯಾಪ್ಟನ್, ಶ್ರೀ ರಾಮಮೂರ್ತಿ ಸ್ಕೌಟ್ ಮಾಸ್ಟರ್ ಉಪಸ್ಥಿತರಿದ್ದರು.

* ಸೆಪ್ಟೆಂಬರ್ 15ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ, ಶ್ರೀ ತರಳಬಾಳು ಜಗದ್ಗುರು ವಸತಿಯುತ ಶಾಲೆಯಲ್ಲಿ ದೇಶಭಕ್ತಿ ಗೀತೆಗಳ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅತಿಥಿಗಳಾಗಿ ಶ್ರೀ ದಿನೇಶ್ ಕೆ. ಶೆಟ್ಟಿ, ಸ್ಥಳೀಯ ಸಂಸ್ಥೆ ಅಧ್ಯಕ್ಷರು, ಶ್ರೀಮತಿ ಶಾರದ ಮಾಗನಹಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಅಶ್ವಿನಿ. ಜೆ., ಎಸ್.ಜಿ.ವಿ ಭಾಗವಹಿಸಿದ್ದರು. ಶ್ರೀ ರವೀಂದ್ರಸ್ವಾಮಿ ಟಿ.ಎಂ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ಆಯೋಜಿಸಿದ್ದರು. ತೀರ್ಪುಗಾರರಾಗಿ ಶ್ರೀ ಜ್ಯೋತಿ ಬಿ. ಅಂಗಡಿ ಭಾಗವಹಿಸಿದ್ದರು. ಗೈಡ್ ಕ್ಯಾಪ್ಟನ್‌ಗಳಾದ ಶ್ರೀಮತಿ ಅನಿತಾ, ಶ್ರೀಮತಿ ರಜಿನಿ ಹೆಚ್.ಎಂ., ಶ್ರೀಮತಿ ದೀಪಿಕಾ, ಶ್ರೀಮತಿ ಸುಜಾತ, ಸ್ಕೌಟ್ ಮಾಸ್ಟರ್‌ಗಳಾದ ಶ್ರೀ ವಿಜಯ್ ಕುಮಾರ್ ಹಾಗೂ ಪೋಷಕರು ಭಾಗವಹಿಸಿದ್ದರು.



* ಸೆಪ್ಟೆಂಬರ್ 15 ರಂದು ಅಂತರ್‌ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಮಾನವ ಸರಪಳಿ ನಿರ್ಮಿಸುವ ಕಾರ್ಯಕ್ರಮವನ್ನು ಹೊನ್ನಾಳಿ ಮತ್ತು ಹರಿಹರ ಸ್ಥಳೀಯ ಸಂಸ್ಥೆ ವತಿಯಿಂದ ಆಯೋಜಿಸಲಾಗಿತ್ತು.

* ಸೆಪ್ಟೆಂಬರ್ 21 ರಂದು ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆ ವತಿಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಶ್ರೀಮತಿ ಪುಷ್ಪ ಮಹಾಲಿಂಗಪ್ಪ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ರಾಮಮೂರ್ತಿ, ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ಮಂಜುಳ, ಕಬ್ ವಿಭಾಗದ ನಾಯಕರಾಗಿ ಶ್ರೀಮತಿ ಗೀತಾ, ಬುಲ್‌ಬುಲ್ ವಿಭಾಗದ ನಾಯಕರಾಗಿ ಶ್ರೀಮತಿ ಬಸವ್ವಕಲ್ ಕೋಟಿ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಶಾಂತಿ ದಿನಾಚರಣೆ ದಿನವನ್ನು ಆಚರಿಸಲಾಯಿತು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಶ್ರೀಮತಿ ಮಮತ, ಗೈಡ್ ಕ್ಯಾಪ್ಟನ್, ಶ್ರೀ ಮಹಾಂತೇಶ್ ನಾಯಕ್, ಶ್ರೀ ಜೆ.ಎಸ್. ವಿಜಯ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ಆಯೋಜಿಸಿದ್ದರು.



* ಸೆಪ್ಟೆಂಬರ್ 28 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. 60 ಸ್ಕೌಟ್ಸ್ ಮತ್ತು 42 ಗೈಡ್ಸ್‌ಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ದುಗ್ಗಪ್ಪ, ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ಮಂಜುಳ ಕೆ.ಎಂ ಕಾರ್ಯನಿರ್ವಹಿಸಿದರು. ಸಹ ನಾಯಕರುಗಳಾಗಿ ಶ್ರೀ ಮಹೇಶ್ ಎಂ.ಸಿ., ಶ್ರೀಮತಿ ಸುನಿತಾಬಾಯಿ, ಶ್ರೀಮತಿ ನಿರ್ಮಲಾ, ಶ್ರೀಮತಿ ಸುನಿತಾ ಎಂ., ಕಾರ್ಯನಿರ್ವಹಿಸಿದರು.



* ಸೆಪ್ಟೆಂಬರ್ 29 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ಅನ್‌ಮೋಲ್ ಶಾಲೆಯಲ್ಲಿ ಬುಕ್ ಬೈಂಡರ್ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಅನ್ಮೋಲ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ತಮ್ಮ ಬಳಿ ಉಳಿದಂತಹ ಪೇಪರ್‌ಗಳ ಸಹಾಯದಿಂದ ಬುಕ್ ಬೈಡಿಂಗ್ ಹೇಗೆ ಮಾಡುವುದು ಎಂಬುದನ್ನು ತಿಳಿದುಕೊಂಡರು. ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ರವೀಂದ್ರಸ್ವಾಮಿ ಟಿ.ಎಂ. ಹಾಗೂ ಶ್ರೀ ವಿಜಯ್‌ಕುಮಾರ್ ಉಪಸ್ಥಿತರಿದ್ದರು.

* ಅಕ್ಟೋಬರ್ 02 ರಂದು ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ಗಾಂಧೀ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

* ಅಕ್ಟೋಬರ್ 02 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಸ್.ಪಿ.ಎಸ್ ನಗರದಲ್ಲಿ ಶ್ರೀಮತಿ ಗದಿಗೆವ್ವ ಅವರ ಮಾರ್ಗದರ್ಶನದಲ್ಲಿ ಗಾಂಧಿಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

## ಗದಗ

* ಆದರ್ಶ ಶಿಕ್ಷಣ ಸಮಿತಿಯ ಶ್ರೀ ದೇವದತ್ತ ಶಂಕರರಾವ್ ಕುರ್ತಕೋಟಿ ಮೆಮೋರಿಯಲ್ ಪದವಿ ಪೂರ್ವ ವಾಣಿಜ್ಯ ಮಹಾವಿದ್ಯಾಲಯದ ವಿಶ್ವ ಪ್ರಭಾ ರೋವರ್ಸ್ ಮತ್ತು ರೇಂಜರ್ಸ್ ಘಟಕದ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಪ್ರಯುಕ್ತ ಮಹಾ ವಿದ್ಯಾಲಯದ ಆವರಣದಲ್ಲಿರುವ ಗಿಡಗಳ ಬುಡಗಳಲ್ಲಿ ನೀರು ನಿಲ್ಲುವಂತೆ ಗುಣಿತೆಗೆದು ಸುತ್ತ ಇಟ್ಟಿಗೆಗಳನ್ನು ಇಟ್ಟು ಅಲಂಕೃತಗೊಳಿಸುವ ಮೂಲಕ ಶ್ರಮದಾನ ಕಾರ್ಯಕ್ರಮವನ್ನು ಜರುಗಿಸಲಾಯಿತು. ಪದವಿ ಪೂರ್ವ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಆರ್.ಆರ್. ಕುಲಕರ್ಣಿಯವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು, ರೋವರ್ಸ್ ಸ್ಕೌಟ್ಸ್ ಲೀಡರ್ ಶ್ರೀ ಬಸವರಾಜ ಟಿ.ಪಿ., ರೇಂಜರ್ಸ್ ಲೀಡರ್ ಶ್ರೀಮತಿ ಅಕ್ಷತಾ ಏಳೂರ, ದೈಹಿಕ ಉಪನ್ಯಾಸಕರಾದ ಶ್ರೀ ಆದಿತ್ಯ ಜೋಶಿ, ರೋವರ್ಸ್ ಮತ್ತು ರೇಂಜರ್ಸ್‌ಗಳು ಉಪಸ್ಥಿತರಿದ್ದರು.



## ಹಾಸನ

* ಆಲೂರು ತಾಲ್ಲೂಕು ಸ್ಥಳೀಯ ಸಂಸ್ಥೆಯ ವತಿಯಿಂದ ಆಗಸ್ಟ್ 05 ರಂದು ಬಿ.ಆರ್.ಸಿ. ಕೇಂದ್ರದಲ್ಲಿ ತಾಲ್ಲೂಕು ಮಟ್ಟದ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್ ಸಮಾವೇಶ ಹಾಗೂ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಯಶಸ್ವಿಯಾಗಿ ಮಾಡಲಾಯಿತು. ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಕೃಷ್ಣಗೌಡರವರು ಉದ್ಘಾಟನೆಯನ್ನು ನೇರವೇರಿಸಿ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಈ ಸಂಧರ್ಭದಲ್ಲಿ ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದರು. 120ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ.




* ಹಾಸನ ತಾಲ್ಲೂಕು ಸ್ಥಳೀಯ ಸಂಸ್ಥೆಯ ವತಿಯಿಂದ ಆಗಸ್ಟ್ 06 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ತಾಲ್ಲೂಕು ಮಟ್ಟದ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್ ಸಮಾವೇಶದ ಉದ್ಘಾಟನೆಯನ್ನು ಜಿಲ್ಲಾ ಮುಖ್ಯ ಆಯುಕ್ತರು ಡಾ॥ ವೈ.ಎಸ್. ವೀರಭದ್ರಪ್ಪ ರವರು ನೇರವೇರಿಸಿ ಶಿಕ್ಷಕರಿಗೆ ಶುಭ ಹಾರೈಸಿದರು. ಈ ಸಂಧರ್ಭದಲ್ಲಿ ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

* ಚನ್ನರಾಯಪಟ್ಟಣ ತಾಲ್ಲೂಕು ಸಂಸ್ಥೆಯ ಗುಡ್ ಸಿಟಿಜನ್ ಶಾಲೆ ಹಡೇನಹಳ್ಳಿಯ ಶಾಲೆಯಲ್ಲಿ ಆಗಸ್ಟ್ 07 ರಂದು ಘಟಕ ಉದ್ಘಾಟನಾ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಶಾಲೆಗೆ ಬೇಟಿ ನೀಡಿ, ಘಟಕ ಉದ್ಘಾಟನೆ ಮಾಡಿ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ಈ ಸಂಧರ್ಭದಲ್ಲಿ ಶಾಲಾ ಮುಖ್ಯಸ್ಥರು, ಶಾಲಾ ಆಡಳಿತ ಮಂಡಳಿ ಸ್ಕೌಟ್–ಗೈಡ್‌ಗಳು ತಾಲ್ಲೂಕು ಸಂಸ್ಥೆ ಪದಾಧಿಕಾರಿಗಳು ರಾಜ್ಯ ಸಂಘಟನಾ ಆಯುಕ್ತರು ಶ್ರೀ ಪ್ರಭಾಕರ್ ಭಟ್ ಉಪಸ್ಥಿತರಿದ್ದರು.



* ಚನ್ನರಾಯಪಟ್ಟಣ ತಾಲ್ಲೂಕು ಸಂಸ್ಥೆಯ ಜ್ಞಾನ ಸಾಗರ ಅಂತರರಾಷ್ಟ್ರೀಯ ಶಾಲೆಯಲ್ಲಿ ವಸ್ತು ಪ್ರದರ್ಶನ ಮತ್ತು ಸ್ಕೌಟ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್ ಸಮಾವೇಶವನ್ನು ಆಯೋಜನೆ ಮಾಡಲಾಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಉದ್ಘಾಟನ ಕಾರ್ಯಕ್ರಮವನ್ನು ನೇರವೇರಿಸಿದರು. ನಂತರ ವಿದ್ಯಾರ್ಥಿಗಳು ಮಾಡಿದ ಚಟುವಟಿಕೆಗಳನ್ನು ಗಮನಿಸಿ ವಸ್ತುಪ್ರದರ್ಶನವನ್ನು ವೀಕ್ಷಣೆ ಮಾಡಿ ಶುಭಹಾರೈಸಿದರು. ಈ ಸಂಧರ್ಭದಲ್ಲಿ ಶ್ರವಣಬೆಳಗೋಳ ಜನಪ್ರಿಯ ಶಾಸಕರಾದ ಶ್ರೀ ಬಾಲಕೃಷ್ಣರವರು ಮಾತನಾಡಿ ಸಂಸ್ಥೆಯ ಚಟುವಟಿಕೆಯ ಬಗ್ಗೆ ಹರ್ಷವ್ಯಕ್ತ ಪಡಿಸಿದರು ಶ್ರೀಮತಿ ಭಾರತಿ ನಾಗೇಶ್ ಸರ್ವರನ್ನು ಸ್ವಾಗತಿಸಿದರು ಶಾಲಾ ಮುಖ್ಯೋಪಾಧ್ಯಾಯರಾದ ಡಾ॥ ಸುಜಾ ಫಿಲಿಪ್ಸ್‌ರವರು ಪ್ರಾಸ್ತಾವಿಕ ನುಡಿಗಳನ್ನು ನುಡಿದರು, ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀಮತಿ ದೀಪರವರು ಕಾರ್ಯಚಟುವಟಿಕೆಯ ಬಗ್ಗೆ ಮಾಹಿತಿಯನ್ನು ನೀಡಿದರು ರೋವರ್ಸ್ ಸ್ಕೌಟ್ ಲೀಡರ್ ರೇಂಜರ್ ಲೀಡರ್ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್ ಉಪಸ್ಥಿತರಿದ್ದರು.

* ಅರಕಲಗೂಡು ತಾಲ್ಲೂಕು ಸ್ಥಳೀಯ ಸಂಸ್ಥೆಯ ವತಿಯಿಂದ ತಾಲ್ಲೂಕು ಮಟ್ಟದ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್ ಸಮಾವೇಶ ಮಾಡಲಾಯಿತು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ನಾರಾಯಣ್‌ರವರು ಉದ್ಘಾಟನೆಯನ್ನು ನೇರವೇರಿಸಿ ಶಿಕ್ಷಕರಿಗೆ ಶುಭ ಹಾರೈಸಿದರು. ಈ ಸಂಧರ್ಭದಲ್ಲಿ ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

* ಅರಕಲಗೂಡು ತಾಲ್ಲೂಕು ಸ್ಥಳೀಯ ಸಂಸ್ಥೆಯವತಿಯಿಂದ ತಾಲ್ಲೂಕು ಮಟ್ಟದ ಸ್ಕೌಟ್ಸ್ ಗೈಡ್ಸ್ ರ‍್ಯಾಲಿ ಹಾಗೂ ಗೀತಗಾಯನ ಸ್ಪರ್ಧೆಯನ್ನು ಮಾಡಲಾಯಿತು ತಾಲ್ಲೂಕು ಜಾಥ ಕಾರ್ಯಕ್ರಮವನ್ನು ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಪ್ರಕಾಶ್‌ರವರು



ಹಸಿರು ಬಾವುಟವನ್ನು ತೋರಿಸುವುದರ ಉದ್ಘಾಟಿಸಿದರು. ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ನಾರಾಯಣ್ ಗೀತಗಾಯನ ಸ್ಪರ್ಧೆಯನ್ನು ಅವರು ಉದ್ಘಾಟನೆಯನ್ನು ನೇರವೇರಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಈ ಸಂಧರ್ಭದಲ್ಲಿ ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

* "ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವಂತಹ ಮನೋಭಾವನೆಯನ್ನು ಸ್ಕೌಟ್ಸ್ ಮತ್ತು ಗೈಡ್ಸ್ ನಿರಂತರವಾಗಿ ಬೆಳೆಸುತ್ತಿದೆ. ಸ್ಕೌಟ್ಸ್ ಗೈಡ್ಸ್ ಪ್ರತಿಜ್ಞೆಯಲ್ಲಿಯೇ ದೇಶಕ್ಕೆ ಕರ್ತವ್ಯ ದೇವರಿಗೆ ಕರ್ತವ್ಯ ಇತರರಿಗೆ ಸಹಾಯ ಎಂಬ ಅಂಶಗಳನ್ನು ಹೊಂದಿದೆ. ಜಾತ್ಯಾತೀತವಾಗಿ ಧರ್ಮಾತೀತವಾಗಿ ಸರ್ವರನ್ನು ಪ್ರೀತಿಸುವ ಗೌರವಿಸುವ, ಪರಸ್ಪರರಿಗೆ ಸಹಾಯ ಮಾಡುವ ಮನೋಭಾವನೆಯನ್ನು ಬೆಳೆಸಬೇಕಾದ ಅನಿವಾರ್ಯತೆ ಇದೆ". ಎಂದು ಹಾಸನ ತಾಲೂಕು ಸ್ಥಳೀಯ ಸಂಸ್ಥೆ ವತಿಯಿಂದ ಹಾಸನ ನಗರದ ಸ್ಕೌಟ್ ಭವನದಲ್ಲಿ ಹಮ್ಮಿಕೊಂಡಿದ್ದ ತಾಲೂಕಾ ಮಟ್ಟದ ದೇಶಭಕ್ತಿಗೀತ ಗಾಯನ ಸ್ಪರ್ಧಾ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಶ್ರೀಮತಿ ವನಜಾಕ್ಷಿಯವರು ನೀಡಿದರು. ಕಾರ್ಯಕ್ರಮದಲ್ಲಿ ಉದ್ಘಾಟನಾ ನುಡಿಗಳನ್ನಾಡಿದ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿಯವರು "ಇದು ಸಮೂಹದಲ್ಲಿ ಹಾಡುವಂತಹ ಗಾಯನವಾದುದರಿಂದ ಎಲ್ಲರಲ್ಲಿಯೂ ನಾನೂ, ಹಾಡಬಲ್ಲೆನೆಂಬ ವಿಶ್ವಾಸ ಮೂಡಿಸುತ್ತದೆ ವೇದಿಕೆಯ ಭಯ ಹೋಗಲಾಡಿಸಿಕೊಂಡು ಮುಂದೆ ಉತ್ತಮ ಹಾಡುಗಾರರಾಗಿ ರೂಪುಗೊಳ್ಳುವುದಕ್ಕೆ ಇದೊಂದು ಒಳ್ಳೆಯ ವೇದಿಕೆ ಹಾಗಾಗಿ ಹೆಚ್ಚು ಹೆಚ್ಚು ಮಕ್ಕಳು ಆಸಕ್ತಿಯಿಂದ ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು" ಎಂದು ಹೇಳಿದರು.

* ಆಗಸ್ಟ್ 24 ಮತ್ತು 25 ರಂದು ಹಾಸನ ಜಿಲ್ಲಾ ಸಂಸ್ಥೆಯ ವತಿಯಿಂದ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ್ ಪೂರ್ವ ಸಿದ್ಧತ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದ ನಾಯಕತ್ವವನ್ನು ಶ್ರೀ ಸತೀಶ್ ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ಮಮತ ಬಿ.ಎಲ್.ರವರು ವಹಿಸಿಕೊಂಡಿದ್ದರು.



* ಹಾಸನ ಜಿಲ್ಲಾ ಸಂಸ್ಥೆಯಲ್ಲಿ ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಸಂತ ಫಿಲೋಮಿನ ಶಾಲೆಯ ಗೈಡ್ಸ್ ವಿದ್ಯಾರ್ಥಿಗಳು ಪರಿಸರ ಸ್ನೇಹಿ ಗಣಪತಿಯನ್ನು ಮಾಡಿ ಜಿಲ್ಲಾ

ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಮತ್ತು ಹಿರಿಯ ಗೈಡ್ ಶಿಕ್ಷಕಿ ಶ್ರೀಮತಿ ಕಾಂಚನಮಾಲರವರಿಗೆ ನೀಡಿ ಶುಭ ಕೋರಿರುತ್ತಾರೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ರಾಜ್ಯ ಪುರಸ್ಕಾರ್ ಪರೀಕ್ಷಾ ಶಿಬಿರದ ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಶ್ರೀಮತಿ ಪ್ರಿಯಾಂಕ, ಗೈಡ್ ಶಿಕ್ಷಕಿ ಶ್ರೀಮತಿ ಧನಲಕ್ಷ್ಮಿ, ಶ್ರೀಮತಿ ಅನನ್ಯ, ಶ್ರೀ ಚಂದನ್ ಚ್ರಚಿಲ್ ಎ. ಹಾಗೂ 25ಕ್ಕೂ ಹೆಚ್ಚು ಗೈಡ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



* ಆಲೂರು ತಾಲ್ಲೂಕು ಸ್ಥಳೀಯ ಸಂಸ್ಥೆಯ ವತಿಯಿಂದ ಆಗಸ್ಟ್ 05 ರಂದು ಬಿಆರ್‌ಸಿ ಕೇಂದ್ರದಲ್ಲಿ ತಾಲ್ಲೂಕು ಮಟ್ಟದ ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಸಮಾವೇಶ ಹಾಗೂ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಮಾಡಲಾಯಿತು. ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಕೃಷ್ಣಗೌಡ ರವರು ಉದ್ಘಾಟನೆಯನ್ನು ನೇರವೇರಿಸಿ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಈ ಸಂಧರ್ಭದಲ್ಲಿ ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿರುತ್ತಾರೆ. 120ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ.

## ಕಾರವಾರ (ಉ.ಕ.)

* ಭಟ್ಕಳ ತಾಲ್ಲೂಕಿನ ಅಲಿ ಪಬ್ಲಿಕ್ ಶಾಲೆಯ ಮಕ್ಕಳಿಗೆ ಎ.ಎಸ್.ಓ.ಸಿ. ಶ್ರೀಮತಿ ಭಾರತಿ ಡಾಯಸ ಹಾಗೂ ಡಿಟಿಸಿ ಶ್ರೀಮತಿ ಬೇಬಿ ಪಡಿಯಾರ್ ಅವರುಗಳು ಹೆಚ್ಚಿನ ಮಾಹಿತಿ ನೀಡಿದರು. ಸ್ಕೌಟ್ ಮಾಸ್ಟರ್ ಆದ ಶ್ರೀ ಮುಜಾಹಿದ್ ರವರು ಹಾಗೂ ಅಲ್ಲಿಯ ಮುಖ್ಯೋಪಾಧ್ಯಾಯರು, ಪಿ.ಯು. ಕಾಲೇಜಿನ ಪ್ರಾಂಶುಪಾಲರು ರಾಷ್ಟ್ರಪತಿ ಸ್ಕೌಟ್ ಆದ ಶ್ರೀ ಅಬ್ದುಲ್ ಮಾಜಿದ್ ಕೊಲಾರವರು ಪೂರ್ಣ ಸಹಕಾರ ನೀಡಿದರು.



* ಸೆಪ್ಟೆಂಬರ್ 13 ರಂದು ಸೆಂಟ್ ಥೋಮಸ ಆಂಗ್ಲ ಮಾಧ್ಯಮ ಶಾಲೆಯ ಕಬ್, ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್‌ಗಳಿಗೆ ದೀಕ್ಷಾ ಸಮಾರಂಭವನ್ನು ಆಯೋಜಿಸಲಾಗಿತ್ತು.



ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಟ್ರೇಜಾ ಫರ್ನಾಂಡಿಸ್‌ರವರು ಜಿಲ್ಲೆಗೆ ವರ್ಗಾವಣೆಯಾಗಿ ಆಗಮಿಸಿದ ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಭಾರತಿ ಡಾಯಸ್‌ರವರನ್ನು ಸ್ವಾಗತಿಸಿದರು.

* ಸೆಪ್ಟೆಂಬರ್ 15 ರಂದು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ದಳ ನಾಯಕ ನಾಯಕಿಯರು. ಕಾರವಾರದಿಂದ ಭಟ್ಕಳದ ವರೆಗೆ ಹಮ್ಮಿಕೊಂಡಿದ್ದ ಮಾನವ ಸರಪಳಿಯಲ್ಲಿ ಭಾಗವಹಿಸಿ ನೀರು, ಮಜ್ಜಿಗೆ ನೀಡುವಲ್ಲಿಯು ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ. ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರ, ಎ.ಎಸ್.ಓ.ಸಿ ಶ್ರೀ ಭಾರತಿ ಡಾಯಸ್‌ರವರು ಪಾಲ್ಗೊಂಡಿದ್ದರು.



* ಸೆಪ್ಟೆಂಬರ್ 21 ರಂದು "ಅಂತರಾಷ್ಟ್ರೀಯ ಕರಾವಳಿ ತೀರ ಸ್ವಚ್ಛತಾ ದಿನ"ವನ್ನು ಜಿಲ್ಲಾ ಮಟ್ಟದಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಕಾರವಾರ, ಪಿ.ಯು. ಕಾಲೇಜು, ಕುಮಟಾ, ಪಿ.ಯು.ಕಾಲೇಜು ಭಟ್ಕಳ, ಅಲಿ ಪಬ್ಲಿಕ್ ಶಾಲೆ, ಭಟ್ಕಳ, ಶ್ರೀ ದುರ್ಗಾಪರಮೇಶ್ವರಿ ಪ್ರೌಢ ಶಾಲೆ, ಭಟ್ಕಳದ ರೋವರ್ಸ್-ರೇಂಜರ್ಸ್, ಸ್ಕೌಟ್ಸ್-ಗೈಡ್ಸ್‌ಗಳು ಹಾಗೂ ದಳ ನಾಯಕರು ಹಾಜರಿದ್ದು ಕರಾವಳಿ ತೀರವನ್ನು ಸ್ವಚ್ಛಗೊಳಿಸಿದರು.



* ಅಕ್ಟೋಬರ 01 ರಂದು ಹೀರಕ್ ಪಂಕ್ ಬುಲ್‌ಬುಲ್‌ಗಳಿಗೆ ಜಿಲ್ಲಾ ಮಟ್ಟದಲ್ಲಿ ಪರೀಕ್ಷಾ ಶಿಬಿರವನ್ನು ಎ.ಎಸ್.ಓ.ಸಿ ಶ್ರೀ ಭಾರತಿ ಡಾಯಸ್‌ರವರು ಸಂಘಟಿಸಿದ್ದರು. ಎ.ಎಲ್.ಟಿ.(ಫ್ಲಾಕ್) ಶ್ರೀಮತಿ ಶಾರದಾ ಹೆಗಡೆರವರು ನಾಯಕರಾಗಿದ್ದರು.

* ಅಕ್ಟೋಬರ್ 15 ರಂದು ಅಂತರಾಷ್ಟ್ರೀಯ ಕೈ ತೊಳೆಯುವ ದಿನವನ್ನು ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಕಾರವಾರದ ರೋವರ್ಸ್ ರೇಂಜರ್ಸ್‌ಗಳು ಆಚರಿಸಿದರು. ಜಾಥಾವನ್ನು ಕೈಗೊಂಡು ಉಪನ್ಯಾಸಕರುಗಳಿಗೆ, ಜನರಿಗೆ ಕೈ ತೊಳೆಯುವುದರಿಂದ ಮಹತ್ವವನ್ನು ತಿಳಿಸಿಕೊಟ್ಟು ಕೈ ಸ್ವಚ್ಛವಾಗಿ ಇಟ್ಟುಕೊಳ್ಳುವಂತೆ ಕರೆ ನೀಡಿದರು. ಇದರ ನೇತೃತ್ವವನ್ನು ರೇಂಜರ್ ಲೀಡರ್ ಶ್ರೀಮತಿ ಜ್ಯೋತಿ ಕಿನಿರವರು ವಹಿಸಿದ್ದರು.

## ಕೊಡಗು

* ಅಕ್ಟೋಬರ್ 02 ರಂದು ಕುಶಾಲನಗರ ಸ್ಥಳೀಯ ಸಂಸ್ಥೆ, ಕುಶಾಲನಗರ ಪುರಸಭೆಯ ಕಾರ್ಯಾಲಯ ಹಾಗೂ ಕುಶಾಲನಗರ ಫಾತಿಮಾ ಪ್ರೌಢಶಾಲೆಯ ಸಂಯುಕ್ತಾಶ್ರಯದಲ್ಲಿ ಶಾಲಾ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸಿರುಪಡೆಯ ಇಕೋ ಕ್ಲಬ್‌ನ ಸಹಯೋಗದೊಂದಿಗೆ ಕುಶಾಲನಗರ ಫಾತಿಮಾ ಪ್ರೌಢಶಾಲೆಯಲ್ಲಿ 155ನೇ ವರ್ಷದ ಮಹಾತ್ಮ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಮತ್ತು ಸ್ವಚ್ಛಾತಾ ಹೀ ಸೇವಾ ಶ್ರಮದಾನ ಕಾರ್ಯಕ್ರಮ ನಡೆಯಿತು. ಫಾತಿಮಾ ಶಾಲಾ



ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಶಾಲಾ ಅವರಣದಲ್ಲಿ ಅಮ್ಮನ ಹೆಸರಿನಲ್ಲಿ ಗಿಡ ನೆಡುವ ಮೂಲಕ ಸ್ವಚ್ಛತಾ ಆಂದೋಲಕ್ಕೆ ಚಾಲನೆ ನೀಡಲಾಯಿತು. ಸ್ವಚ್ಛತಾ ಶ್ರಮದಾನ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಸ್ಕೌಟ್ಸ್-ಗೈಡ್ಸ್ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಡಾ. ಪ್ರವೀಣ್ ದೇವರಕೊಂಡ ಸೋಮಪ್ಪ "ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ತಮ್ಮನ್ನು ಸದಾಕಾಲ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸ್ಕೌಟ್ಸ್-ಗೈಡ್ಸ್ ಸಹಕಾರಿಯಾಗಲಿದೆ" ಎಂದರು. "ಪ್ರತಿಯೊಬ್ಬರೂ ತಮ್ಮ ಸುತ್ತಲಿನ ಪರಿಸರವನ್ನು ಶ್ರಮದಾನದ ಮೂಲಕ ಸ್ವಚ್ಛತಾ ಕಾರ್ಯಕೈಗೊಂಡು ಪರಿಸರವನ್ನು ಸ್ವಚ್ಛಗೊಳಿಸಬೇಕು" ಎಂದು ಡಾ. ಪ್ರವೀಣ್ ಹೇಳಿದರು. ಸ್ವಚ್ಛ ಭಾರತ್ ಮಿಷನ್ ಮತ್ತು ಸ್ವಚ್ಛತಾ ಹಿ ಸೇವಾ ಅಭಿಯಾನದ ಮಹತ್ವ ಕುರಿತು ಮಾಹಿತಿ ನೀಡಿ ಸ್ವಚ್ಛತೆಯ ಸೇವೆ ಕುರಿತು ಪರಿಸರ ಪ್ರತಿಜ್ಞಾವಿಧಿ ಬೋಧಿಸಿದ ಭಾರತ್ ಸ್ಕೌಟ್ಸ್-ಗೈಡ್ಸ್‌ನ ಕೊಡಗು ಜಿಲ್ಲಾ ಸಂಸ್ಥೆಯ ಜಿಲ್ಲಾ ಸಾರ್ವಜನಿಕ ಸಂಪರ್ಕ ಅಧಿಕಾರಿ ಶ್ರೀ ಟಿ.ಜಿ. ಪ್ರೇಮ್ ಕುಮಾರ್ "ಪ್ರತಿಯೊಬ್ಬರು ತಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಿ ಸ್ವಚ್ಛ ಭಾರತ್ ಅಭಿಯಾನದ ಮೂಲಕ ಸುಂದರ ಹಾಗೂ ಹಸಿರು ಪರಿಸರ ನಿರ್ಮಾಣಕ್ಕೆ ಕೈಜೋಡಿಸಬೇಕು" ಎಂದರು. ಪುರಸಭೆಯ ಹಿರಿಯ ಆರೋಗ್ಯ ನಿರೀಕ್ಷಕ ಶ್ರೀ ಎಂ.ಸಿ. ಉದಯಕುಮಾರ್ ಮಾತನಾಡಿ "ಪ್ರತಿಯೊಬ್ಬರು ನಗರ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮನವಿ" ಮಾಡಿದರು. ಫಾತಿಮಾ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಜಪುಡಿ ಸಿಲ್ವ ಮಾತನಾಡಿ "ವಿದ್ಯಾರ್ಥಿಗಳು ಸ್ವಚ್ಛತೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು" ಎಂದರು. ಜಿಲ್ಲಾ ಪದಾಧಿಕಾರಿಗಳು ಕ್ಲಬ್ ವಲಯ ಅಧಿಕಾರಿ ಶ್ರೀ ಸುಮನ್ ಬಾಲಚಂದ್ರ ಲಯನ್ಸ್ ಕ್ಲಬ್ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕಿ ಶ್ರೀಮತಿ ಎಲ್. ಸುಕುಮಾರಿ, ಪೌರಕಾರ್ಮಿಕರು ಸ್ವಯಂಸೇವಕರು ಶಾಲಾ ವಿದ್ಯಾರ್ಥಿಗಳು ಇದ್ದರು. ಫಾತಿಮಾ ಪ್ರೌಢಶಾಲೆ ಆವರಣ, ಅಂಚೆ ಕಚೇರಿಯ ರಸ್ತೆ ಹಾಗೂ ಕಾವೇರಿ ನದಿಗೆ ತೆರಳುವ ಅಯ್ಯಪ್ಪಸ್ವಾಮಿ ದೇವಸ್ಥಾನ ರಸ್ತೆಯಲ್ಲಿ ಗಾಂಧಿ ಜಯಂತಿ ಹಾಗೂ ಸ್ವಚ್ಛ ಭಾರತ್ ಅಭಿಯಾನದಡಿ ಸ್ವಚ್ಛತಾ ಹೀ ಸೇವಾ ಕಾರ್ಯಕ್ರಮದ ಅಂಗವಾಗಿ ಪುರಸಭೆಯ ಪೌರಕಾರ್ಮಿಕ ಜೊತೆಗೂಡಿದ ಶಿಕ್ಷಕರು ಸ್ಕೌಟ್ಸ್-ಗೈಡ್ಸ್ ಸ್ವಯಂಸೇವಕರು ವಿದ್ಯಾರ್ಥಿಗಳು ಸ್ವಚ್ಛತೆ ಕೈಗೊಂಡರು ಪೌರಕಾರ್ಮಿಕರ ಜೊತೆಗೂಡಿದ ಸ್ವಚ್ಛತೆ ಕೈಗೊಂಡರು. ಪೌರಕಾರ್ಮಿಕರ ಜೊತೆಗೂಡಿದ ವಿದ್ಯಾರ್ಥಿಗಳು ಅಂಚೆ ಕಚೇರಿ ಬಳಿಯ ಬೆಳೆದಿದ್ದ ಗಿಡಗಂಟೆಗಳನ್ನು ತೆರವುಗೊಳಿಸಿದರು.

* ಅಕ್ಟೋಬರ್ 02 ರಂದು ಕೊಡಗು ಜಿಲ್ಲೆಯಲ್ಲಿ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಸ್ಮರಣೆಯನ್ನು ಜಿಲ್ಲಾಡಳಿತ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಮೂಲಕ ಆಚರಿಸಲಾಯಿತು. ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳಾದ ಶ್ರೀ ವೆಂಕಟ್‌ರಾಜ್, "ಮಹಾತ್ಮ ಗಾಂಧೀಜಿ ಅವರು ನನ್ನ ಜೀವನವೇ ನನ್ನ ಸಂದೇಶವನ್ನು ಸಾರಿರು. ಹಾಗೆಯೇ ಪ್ರತಿಯೊಬ್ಬರ ಬದುಕು ಜೀವನದ ಸಂದೇಶವಾಗುವಂತೆ ಬಾಳಬೇಕು" ಎಂದು ಹೇಳಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಶ್ರೀಮತಿ ಆರ್. ಐಶ್ವರ್ಯ ಮಾತನಾಡಿ "ಮಹಾತ್ಮ ಗಾಂಧೀಜಿ ಅವರು ಸ್ವಾತಂತ್ರ್ಯದ ಪ್ರತೀಕ ಗ್ರಾಮ ಸ್ವರಾಜ್ಯದ ಸಹಕಾರ ಮೂರ್ತಿ ಎಲ್ಲರ ಮೆಚ್ಚಿನ ಬಾಪು" ಎಂದು ಬಣ್ಣಿಸಿದರು. ಸ್ಕೌಟ್ಸ್ ಮತ್ತು ಗೈಡ್ಸ್‌ನ ಪ್ರಧಾನ ಆಯುಕ್ತ ಶ್ರೀ ಕೆ.ಟಿ. ಬೇಬಿಮ್ಯಾಥ್ಯೂ ಮಾತನಾಡಿ "ಮಹಾತ್ಮ ಗಾಂಧೀಜಿ ಅವರು ಕರ್ನಾಟಕ ರಾಜ್ಯಕ್ಕೆ ಹಲವು ಬಾರಿ ಭೇಟಿ ನೀಡಿ ಕೊಡಗು ಜಿಲ್ಲೆಗೂ ಭೇಟಿ ನೀಡಿದ್ದು ವಿಶೇಷವಾಗಿದೆ" ಎಂದರು ಸಭಾ ಕಾರ್ಯಕ್ರಮಕ್ಕೂ ಮೊದಲು ಜಿಲ್ಲಾಧಿಕಾರಿಗಳ ಶ್ರೀ ವೆಂಕಟ್ ರಾಜ್ಯ ಧ್ವಜಾರೋಹಣ ನೆರವೇರಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಶ್ರೀಮತಿ ಆರ್. ಐಶ್ವರ್ಯ ಪ್ರತಿಜ್ಞಾವಿಧಿ ಭೋದಿಸಿದರು. ನಗರದ ಫೀಲ್ಡ್ ಮಾರ್ಷಲ್ ಗಾಂಧಿ ಭವನದ ವರೆಗೆ ಸ್ವಚ್ಛತಾ ಜಾತ ನಡೆಯಿತು. ಇದೇ ಸಂದರ್ಭ ಜಿಲ್ಲಾ ಸಂಘಟರಾದ ಶ್ರೀಮತಿ ಯು.ಸಿ. ದಮಯಂತಿ ಭಾರತ್ ಸೇವಾದಳ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



* ಅಕ್ಟೋಬರ್ 03 ರಂದು ಅರಣ್ಯ ಭವನ ಮುಂಭಾಗದಲ್ಲಿ "ವನ್ಯಜೀವಿ ಸಂರಕ್ಷಣಾ ದಿನಾಚರಣೆ"ಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಹಾಯಕ ಆಯುಕ್ತರಾದ ಶ್ರೀಮತಿ ಸುಲೋಚನ, ಗೈಡ್ ಆಯುಕ್ತರಾದ ಶ್ರೀಮತಿ ಮೈಥಿಲಿ ರಾವ್, ಸ್ಕೌಟ್ ತರಬೇತಿ ಆಯುಕ್ತರಾದ ಶ್ರೀ ರಂಜಿತ್, ಕೆ.ಯು. ಸ್ಥಾನಿಕ ಆಯುಕ್ತರಾದ ಶ್ರೀ ಎಚ್.ಆರ್. ಮುತ್ತಪ್ಪ, ಸಂತ ಜೋಸೆಫ್ ಪರ ಶಾಲೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ಪ್ರೇಮ, ಕ್ರೆಸೆಂಟ್ ಶಾಲೆಯ ಗೈಡ್ ಶಿಕ್ಷಕಿ ಶ್ರೀಮತಿ ತೌಸಿನ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಸೆಪ್ಟೆಂಬರ್ 14 ರಂದು ಚೆಟ್ಟಿಮಾನಿಯ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಸ್ಥಳೀಯ ಸಂಸ್ಥೆಯ ಸಂಪಾಜೆಗೆ ಒಳಪಟ್ಟ ಶಾಲಾ ಕಾಲೇಜುಗಳ ಕಬ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ದೇಶಭಕ್ತಿ ಗೀತೆ ಮತ್ತು ಜನಪದ ಗೀತೆ ಸ್ಪರ್ಧೆಯನ್ನು ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಕುಂದಚ್ಚೇರಿ ಗ್ರಾಮ ಪಂಚಾಯಿತಿ, ಅಧ್ಯಕ್ಷರು ಹಾಗೂ ಮಾಜಿ ಸೈನಿಕರಾದ ಶ್ರೀ ಪೊಡನೊಳನ ದಿನೇಶ್ ಜ್ಯೋತಿ ಬೆಳಗಿ ಉದ್ಘಾಟಿಸಿ "ಪ್ರತಿಯೊಬ್ಬರು ಶಿಸ್ತು ಮತ್ತು ರಾಷ್ಟ್ರ ಪ್ರೇಮವನ್ನು ಮೈಗೂಡಿಸಿಕೊಂಡಾಗ ನಮ್ಮ ಬದುಕು ಸುಂದರವಾಗಿರುತ್ತದೆ. ಇಂತಹ ಕಾರ್ಯಕ್ರಮ ಇದಕ್ಕೆ ಪೂರಕವಾಗಿದ್ದು, ಮಕ್ಕಳ ಪ್ರತಿಭೆಯನ್ನು ಗುರುತಿಸಲು ಸಹಕಾರಿಯಾಗಿದೆ" ಎಂದು ನುಡಿದು ಶುಭ ಹಾರೈಸಿದರು. ಮುಖ್ಯ ಅತಿಥಿಗಳಾದ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಅಣ್ಣಯ್ಯ ಕೆ.ಎಸ್. ನಮ್ಮ ದೇಶ "ನಮ್ಮ ಹೆಮ್ಮೆ ಸದಾ ನಾವು ದೇಶ ಪ್ರೇಮಿಗಳಾಗಿಯೇ ಬದುಕಿದಾಗ ಉತ್ತಮ ರಾಷ್ಟ್ರ ನಿರ್ಮಾಣ ಆಗುತ್ತದೆ" ಎಂದು ಕಿವಿಮಾತು ಹೇಳಿದರು. ಸಭಾ ಅಧ್ಯಕ್ಷತೆಯನ್ನು ಸಂಪಾಜೆ ಸ್ಥಳೀಯ ಸಂಸ್ಥೆ ಅಧ್ಯಕ್ಷ ಶ್ರೀ ಧನಂಜಯ ಎಂ. ವಹಿಸಿ ಕಾರ್ಯಕ್ರಮದ ರೂಪುರೇಷೆಗಳನ್ನು ತಿಳಿಸಿ ಸ್ಪರ್ಧಿಗಳಿಗೆ ಶುಭ ಕೋರಿದರು. ವೇದಿಕೆಯಲ್ಲಿ ಸಂಪಾಜೆ ಸ್ಥಳೀಯ ಸಂಸ್ಥೆ ಉಪಾಧ್ಯಕ್ಷ ಹಾಗೂ ನಿವೃತ್ತ ಶಿಕ್ಷಕ



ಶ್ರೀ ಶ್ರೀಧರ್ ಎ.ಎಸ್. ತೀರ್ಪುಗಾರರಾದ ಶ್ರೀ ನಾಟೋಳಂಡ ಸರೋಜ ವಿಜು. ಸಿ.ಆರ್.ಪಿ. ಪವಿತ್ರ ಹೆಚ್.ಎ. ಉಪಸ್ಥಿತರಿದ್ದು. ಸುಮಾರು ಮಂದಿ ವಿದ್ಯಾರ್ಥಿ ಸ್ಪರ್ಧಿಗಳು ಹಾಜರಿದ್ದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಉಷಾರಾಣಿ ಸ್ವಾಗತಿಸಿ ವಂದಿಸಿದರು. ಸಹಕಾರ್ಯದರ್ಶಿ ಶ್ರೀಮತಿ ಲಲಿತ ಬಿ.ಕೆ. ಕಾರ್ಯಕ್ರಮ ನಿರೂಪಿಸಿದರು.

* "ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಜೊತೆಗೆ ಶಿಸ್ತು, ಸಂಯಮ ಉತ್ತಮ ನಾಯಕತ್ವ ಗುಣ. ರಾಷ್ಟ್ರೀಯ ಭಾವೈಕ್ಯತೆ ಹಾಗೂ ಮಾನವೀಯ ಮೌಲ್ಯ ಬೆಳೆಯಲು ಸಹಾಯವಾಗುತ್ತದೆ" ಎಂದು ಕೊಡಗು ಜಿಲ್ಲಾ ಸಂಸ್ಥೆಯ ಪ್ರಧಾನ ಆಯುಕ್ತರಾದ ಶ್ರೀಮತಿ ಕೆ. ಬೇಬಿ ಮ್ಯಾಥ್ಯೂರವರು ಹೇಳಿದರು. ಕುಶಾಲನಗರ ತಾಲ್ಲೂಕು ಸ್ಥಳೀಯ ಸಂಸ್ಥೆಯಿಂದ ಮುಳ್ಳುಸೋಗೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಭಾಂಗಣದಲ್ಲಿ ಸೆಪ್ಟೆಂಬರ್ 19 ರಂದು ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ದೇಶಭಕ್ತಿ ಗೀತೆ ಗಾಯನ ಸ್ಪರ್ಧಾ ಕಾರ್ಯಕ್ರಮ ಹಾಗೂ ಸಂಸ್ಥೆಯ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಶ್ರೀ ಪ್ರವೀಣ್ ದೇವರಗೊಂಡ ಸೋಮಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ "ಇಂತಹ ಸ್ಪರ್ಧೆಗಳು ಮಕ್ಕಳಲ್ಲಿ ದೇಶಪ್ರೇಮ ಹಾಗೂ ರಾಷ್ಟ್ರೀಯ ಭಾವೈಕ್ಯತೆ ಬೆಳೆಸಲು ಸಹಕಾರಿಯಾಗಿದೆ" ಎಂದರು. ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಎಂ.ಎಂ. ವಸಂತಿ ಜಿಲ್ಲಾ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್–1 ರ ಸಂಘದ ಅಧ್ಯಕ್ಷ ಶ್ರೀ ಸದಾಶಿವಯ್ಯ ಎಸ್. ಪಲ್ಲೇದ್ ಮಾತನಾಡಿದರು. ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳಿಗೆ ಹೆಚ್ಚಿನ ಸಹಕಾರ ನೀಡುತ್ತಿರುವ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಭಾಗ್ಯ ಅವರನ್ನು ಸಂಸ್ಥೆ ವತಿಯಿಂದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂರವರು ಸನ್ಮಾನಿಸಿದರು. ಜಿಲ್ಲಾ ಪದಾಧಿಕಾರಿಗಳು ಹಾಗೂ ವಿವಿಧ ಶಾಲೆಗಳಿಂದ ಆಗಮಿಸಿದ ಸ್ಕೌಟ್ಸ್–ಗೈಡ್ಸ್‌ಗಳು ಮತ್ತು ಶಿಕ್ಷಕರುಗಳು ಹಾಜರಿದ್ದರು.



* ಸೆಪ್ಟೆಂಬರ್ 15 ರಂದು ನಡೆದ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಸಂಪಾಜೆ ಸ್ಥಳೀಯ ಸಂಸ್ಥೆಗೆ ಒಳಪಟ್ಟ ಗೈಡ್ಸ್ ವಿದ್ಯಾರ್ಥಿಗಳೊಂದಿಗೆ ಸಂಪಾಜೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಉಷಾರಾಣಿ, ಜಿಲ್ಲಾ ಸಂಘಟಕಿ ಶ್ರೀಮತಿ ದಮಯಂತಿ ಮತ್ತು ಶಾಲಾ ಶಿಕ್ಷಕಿ ಶ್ಯಾಮಿಲಿ ಅವರು ಭಾಗವಹಿಸಿದ್ದರು.

* ಸೆಪ್ಟೆಂಬರ್ 11 ರಂದು ಕುಶಾಲನಗರ ಜ್ಞಾನಗಂಗಾ ವಸತಿ ಶಾಲೆಯಲ್ಲಿ ನೂತನ ದಳ ಉದ್ಘಟನೆ.

## ಕೋಲಾರ

* ಸೆಪ್ಟಂಬರ್ 17 ರಂದು ಆರ್.ಎಲ್. ಜಾಲಪ್ಪ ಶಾಲಾ ಆವರಣದಲ್ಲಿ 150 ಹಣ್ಣಿನ ಗಿಡಗಳನ್ನು ಜಾಲಪ್ಪ ಮೆಡಿಕಲ್ ಕಾಲೇಜಿನ ಎನ್.ಎಸ್.ಎಸ್ ಮತ್ತು ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳು ನೆಟ್ಟರು. ಈ ಕಾರ್ಯಕ್ರಮಕ್ಕೆ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಲಕ್ಷ್ಮೀ ಭಟ್‌ರವರು ಚಾಲನೆ ನೀಡಿದರು. ಕಾಲೇಜಿನ ಉಪನ್ಯಾಸಕರಾದ



ಶ್ರೀಯುತ ಸುಮಂತ್‌ರವರ ನಾಯಕತ್ವದಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಶಿವಕುಮಾರ್, ಗೈಡ್ ಕ್ಯಾಪ್ಟನ್ ಶ್ರೀಮತಿ ರಾಜೇಶ್ವರಿ ಮುಂತಾದವರು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 19 ರಂದು ಜಿಲ್ಲಾ ಸಂಸ್ಥೆ ಕೋಲಾರ ಮತ್ತು ಸ್ಥಳೀಯ ಸಂಸ್ಥೆ ಕೆ.ಜಿ.ಎಫ್ ವತಿಯಿಂದ ರಾಜ್ಯ ಪ್ರಧಾನ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಜನ್ಮದಿನದ ಅಂಗವಾಗಿ ಕೆ.ಜಿಎಫ್‌ನಲ್ಲಿನ ಸ್ಕೌಟ್ ಭವನದ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಗೌರಿಶಂಕರ್, ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್‌ಗಳು ಕಾಲೇಜಿನ ಉಪನ್ಯಾಸಕರು ಮತ್ತು ಪಧಾದಿಕಾರಿಗಳು ಉಪಸ್ಥಿತರಿದ್ದರು.



* ಸೆಪ್ಟೆಂಬರ್ 21 ರಂದು ಅಂತರ್ ರಾಷ್ಟ್ರೀಯ ಶಾಂತಿ ದಿನದ ಅಂಗವಾಗಿ ಕೋಲಾರ ನಗರದ ಕುವೆಂಪು ಪಾರ್ಕ್‌ನಲ್ಲಿ ಪ್ಲಾಸ್ಟಿಕ್ ಕಸ ಸಂಗ್ರಹ ಮಾಡಿ ಮಾಲಿನ್ಯ ಮಾಡದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಜಿಲ್ಲಾ ಆಯುಕ್ತರಾದ ಶ್ರೀ ಸುರೇಶ್‌ರವರು ಮಾತನಾಡಿ "ಸಾರ್ವಜನಿಕರು ಸಾರ್ವಜನಿಕ ಆಸ್ತಿಯನ್ನು ಉಳಿಸಿಬೇಕು ಹಾಗೂ ಮಾಲಿನ್ಯ ಮಾಡಬಾರದು" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಘಟಕರಾದ ಸ್ಕೌಟ್ ಬಾಬು, ಸ್ಕೌಟ್ ಮಾಸ್ಟರ್ ಚೇತನ್, ಸುಭಾಷ್ ಶಾಲೆಯ ಸ್ಕೌಟ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 23 ರಂದು ಜಿಲ್ಲಾ ಸ್ಕೌಟ್ಸ್–ಗೈಡ್ಸ್ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ ಉಚಿತವಾಗಿ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಮಾತನಾಡಿ "ಸರ್ಕಾರಿ ಶಾಲೆಗಳ ಬಲವರ್ಧನೆಗೆ ನಮ್ಮ ಎರಡೂ ಸಂಸ್ಥೆಯು ಕೈಲಾದಷ್ಟು ಮಟ್ಟಿಗೆ ಸೇವೆ ಸಲ್ಲಿಸುತ್ತಿದೆ. ಇಂತಹ ಸೇವಾ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಶಶಿಕಾಂತ್, ರೋಟರಿ ಅಧ್ಯಕ್ಷರಾದ ಸ್ಕೌಟ್ ಬಾಬು, ಕಾರ್ಯದರ್ಶಿ ಬೇವಹಳ್ಳಿ ಶಂಕರ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಮಧು ಮುಂತಾದವರು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 25 ರಂದು ಕೋಲಾರ ನಗರದಲ್ಲಿ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ರೇಂಜರ್ಸ್‌ಗಳಿಗೆ ಸಾಮಾನ್ಯ ಮಾಹಿತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ॥ ಮಂಜುಳ, ಸ್ಕೌಟ್ ಬಾಬು ಕಾರ್ಯನಿರ್ವಹಿಸಿದರು.



* ಅಕ್ಟೋಬರ್ 01 ರಂದು ಜಿಲ್ಲಾ ಸ್ಕೌಟ್ಸ್–ಗೈಡ್ಸ್ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ಹಾಗೂ ಲೈಫ್ ಸೇವರ್ಸ್ ಅಸೋಶಿಯನ್ ವತಿಯಿಂದ ಕೆ.ಜಿ.ಎಫ್ ಸ್ಕೌಟ್ ಭವನದಲ್ಲಿ ಆರ್.ಎಲ್. ಜಾಲಪ್ಪ ರಕ್ತನಿಧಿ ಕೇಂದ್ರದ ಸಹಕಾರದಿಂದ ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಗೌರಿಶಂಕರ್‌ರವರ ನಾಯಕತ್ವದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಆಯೋಜನೆ ಮಾಡಿ 36 ಯುನಿಟ್ ರಕ್ತವನ್ನು ಸಂಗ್ರಹಿಸಲಾಯಿತು.

* ಅಕ್ಟೋಬರ್ 02 ರಂದು ಜಿಲ್ಲಾ ಸ್ಕೌಟ್ಸ್-ಗೈಡ್ಸ್ ಸಂಸ್ಥೆ, ಸ್ಥಳೀಯ ಸಂಸ್ಥೆ ಕೋಲಾರ, ರೋಟರಿ ಕೋಲಾರ ನಂದಿನಿ ಹಾಗೂ ಮಹಿಳಾ ಸಮಾಜ ಶಾಲೆ ವತಿಯಿಂದ ಗಾಂಧೀ ಜಯಂತಿಯನ್ನು ಮಹಿಳಾ ಸಮಾಜ ಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರಾದ ಶ್ರೀ ಬಿಸಪ್ಪಗೌಡ, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಆಯುಕ್ತರಾದ ಶ್ರೀ ಸುರೇಶ್, ಶ್ರೀಮತಿ ನವೀನಾ ಪಧಾದಿಕಾರಿಗಳು, ಶಾಲಾ ಮುಖ್ಯಸ್ಥರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಅಕ್ಟೋಬರ್ 02 ರಂದು ಜಿಲ್ಲಾ ಸ್ಕೌಟ್ಸ್ ಗೈಡ್ಸ್ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ಹಾಗೂ ಜಿಲ್ಲಾ ಸರ್ವೋದಯ ಮಂಡಲ ವತಿಯಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಗಾಂಧೀಜಿರವರ ಆದರ್ಶಗಳನ್ನು ರೂಡಿಸಲು ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿ, ಬಹುಮಾನಗಳನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ವಿತರಿಸಿ ಮಾತನಾಡುತ್ತಾ "ಗಾಂಧೀಜಿರವರ ಜೀವನ ಚರಿತ್ರೆಯನ್ನು ಎಲ್ಲರೂ ಓದಿ ತಿಳಿದು ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸರ್ವೋದಯ ಸಮಿತಿಯ ಕಾರ್ಯದರ್ಶಿ ಶ್ರೀ ಕೃಷ್ಣಮೂರ್ತಿ, ಬೇವಹಳ್ಳಿ ಶ್ರೀ ಶಂಕರಪ್ಪ, ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಜಿಲ್ಲಾ ಸಂಘಟಕ ಸ್ಕೌಟ್ ಬಾಬು ಮುಂತಾದವರು ಉಪಸ್ಥಿತರಿದ್ದರು.




* ಅಕ್ಟೋಬರ್ 08 ರಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಸಂಸ್ಥೆ ಜಿಲ್ಲಾ ಸ್ಕೌಟ್ಸ್-ಗೈಡ್ಸ್ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ 150 ಹಣ್ಣಿನ ಗಿಡಗಳನ್ನು ನೆಡಲಾಯಿತು. ಈ ಸಂದರ್ಭದಲ್ಲಿ ಯೋಜನಾಧಿಕಾರಿಗಳಾದ ಶ್ರೀ ಸಿದ್ದಗಂಗಯ್ಯರವರು ಕಾರ್ಯಕ್ರಮ ಉದ್ಘಾಟಿಸಿ "ಮಾತನಾಡುತ್ತಾ ಜಿಲ್ಲೆಯಲ್ಲಿ ಹಸಿರೀಕರಣಕ್ಕೆ ಎಲ್ಲರೂ ಶ್ರಮಿಸಿದಾಗ ಮಾತ್ರ ಬಯಲು ಸೀಮೆಗೆ ಸಕಾಲಕ್ಕೆ ಮಳೆ ಬರಲಿದೆ, ವಿದ್ಯಾರ್ಥಿಗಳು ಗಿಡ ನೆಡುವುದನ್ನು ಹವ್ಯಾಸವಾಗಿ ರೂಡಿಸಿಕೊಳ್ಳಬೇಕು" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರೈಲ್ವೇ ಇಲಾಖೆಯ ಶ್ರೀಮತಿ ಶ್ರೀದೇವಿ, ಶ್ರೀ ಅಶೋಕ್, ಧರ್ಮಸ್ಥಳ ಸಂಘದ ಶ್ರೀ ವಿಜಯ್ ಕುಮಾರ್, ಶ್ರೀಮತಿ ಸೌಮ್ಯ ಮತ್ತು ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಡಾ॥ ಅನುರಾಧ, ಶ್ರೀಮತಿ ಮಂಗಳ ವಿ. ಗೌಡ, ಶ್ರೀ ಸುರೇಶ್, ಶ್ರೀ ವಿಠಲ್‌ರಾವ್, ಶ್ರೀ ಬಾಬು, ಶ್ರೀಮತಿ ಉಮಾದೇವಿ, ಶ್ರೀಮತಿ ಹೇಮಾವತಿ, ಶ್ರೀ ನಿರಂಜನ್, ಶ್ರೀ ಹರೀಶ್ ಮುಂತಾದವರು ಉಪಸ್ಥಿತರಿದ್ದರು.



* ಅಕ್ಟೋಬರ್ 10 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶ್ರೀನಿವಾಸಪುರದಲ್ಲಿನ ರೋವರ್ ಮತ್ತು ರೇಂಜರ್ ದಳಗಳಿಂದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಕಾರ್ಯಕ್ರಮವನ್ನು ರೋವರ್ ಲೀಡರ್ ಶ್ರೀ ನವೀನ್‌ರವರ ನಾಯಕತ್ವದಲ್ಲಿ ಆಯೋಜನೆ ಮಾಡಲಾಯಿತು.

## ಶಿವಮೊಗ್ಗ

* ಶಿವಮೊಗ್ಗ ಜಿಲ್ಲಾ ಸ್ಕೌಟ್ ಭವನದಲ್ಲಿ ಮಹಾತ್ಮಾ ಗಾಂಧಿಜಿಯವರ 155ನೇ ಹಾಗೂ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರೀಯವರ 120ನೇ ಜನ್ಮ ದಿನೋತ್ಸವವನ್ನು ಆಚರಿಸಲಾಯಿತು. ಸರ್ವಧರ್ಮ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕಾರ್ಯಕ್ರಮದಲ್ಲಿ ಶ್ರೀ ರಾಜೇಶ್ ಎ.ವಿ.ರವರು ಎಲ್ಲರಿಗೂ ಸ್ವಾಗತವನ್ನು ಕೋರುತ್ತಾ, ಸ್ಕೌಟ್-ಗೈಡ್‌ಗಳಿಗೆ ಮಹಾತ್ಮಾ ಗಾಂಧಿಯವರ ಜೀವನದ ಬಾಲ್ಯದ ಆದರ್ಶ ಕಥೆಗಳನ್ನು ತಿಳಿಸಿದರು. ಶ್ರೀ ವಿಜಯಕುಮಾರ್ ಅವರು ಸ್ವಾತಂತ್ರ್ಯ ಸಂಗ್ರಾಮವು ನೂರಾರು ವರ್ಷಗಳ ಕಾಲ ನಡೆದ ಹೋರಾಟದ ಫಲ ಎಂದು ತಿಳಿಸಿದರು, ಸಮಾರಂಭದಲ್ಲಿಜಿಲ್ಲಾ ಮುಖ್ಯಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್ ಅವರು ಮಾತನಾಡುತ್ತಾ "ಮಹಾತ್ಮ ಗಾಂಧಿಯವರ ಶಾಂತಿ ಮಂತ್ರ, ಸತ್ಯ ಸಂದತೆ, ಅಹಿಂಸೆ, ಅಸಹಾಕಾರ, ಉಪವಾಸ ಸತ್ಯಾಗ್ರಹಗಳ ಮೂಲಕವೇ ಸ್ವಾತಂತ್ರ ಹೋರಾಟ ನಡೆಸಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟರು" ಎಂದು ತಿಳಿಸಿದರು.



ಜಿಲ್ಲಾ ಸಂಸ್ಥೆಯ ಪದಾದಿಕಾರಿಗಳು ಸ್ಕೌಟ್-ಗೈಡ್ಸ್‌ಗಳು ಜಿಲ್ಲಾ ಸ್ಕೌಟ್ ಭವನದ ಆವರಣವನ್ನು ಸ್ವಚ್ಛಗೊಳಿಸುವ ಮೂಲಕ ಗಾಂಧೀ ಜಯಂತಿ ಕಾರ್ಯಕ್ರಮ ಅರ್ಥಪೂರ್ಣವಾಯಿತು. ಶ್ರೀ ವೈ.ಆರ್. ವೀರೇಶಪ್ಪನವರು ವಂದನಾರ್ಪಣೆ ಮಾಡಿದರು, ಸರ್ವಧರ್ಮ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳು ಸ್ಕೌಟ್-ಗೈಡ್ ಹಾಗೂ ಬುಲ್‌ಬುಲ್ಸ್ ಮಕ್ಕಳು ಜಂಬೋಕಿಡ್ಸ್ ಶಾಲೆಯ ಸಿಬ್ಬಂದಿ ವರ್ಗದವರು ಪೋಷಕರು, ಜಿಲ್ಲಾ ಸಂಸ್ಥೆಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ವಿಜಯನಗರ

* ಅಕ್ಟೋಬರ್ 2 ರಂದು ಟಿ.ಎಂ.ಎ.ಎಸ್.ಡಿ.ಎ.ಬಿ. ಪಬ್ಲಿಕ್ ಶಾಲೆಯಲ್ಲಿ ಸ್ಥಳೀಯ ಸಂಸ್ಥೆ ಹೊಸಪೇಟೆ ಹಾಗೂ ಜಿಲ್ಲಾ ಸಂಸ್ಥೆ ವಿಜಯನಗರದ ವತಿಯಿಂದ ಗಾಂಧಿ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಅಂಗವಾಗಿ ಸರ್ವಧರ್ಮ ಪ್ರಾರ್ಥನೆಯನ್ನು ನೆರವೇರಿಸಿ ಗಾಂಧಿ ಹಾಗೂ ಶಾಸ್ತ್ರಿಯವರ ಕುರಿತಾಗಿ ಜಿಲ್ಲಾ ಕಾರ್ಯದರ್ಶಿಗಳಾಗದ ಶ್ರೀ ಪಿ. ಮಂಜುನಾಥಪ್ಪ ಹಾಗೂ ಶಾಲೆಯ ಪ್ರಭಾರಿ ಪ್ರಾಚಾರ್ಯರಾದ ಶ್ರೀ ಅಶುತೋಷ್ ಮಾತನಾಡಿ ಇಂದಿನ ದಿನಮಾನಗಳಲ್ಲಿ ಆ ಮಹಾನುಭಾವದ ವಿಚಾರಧಾರೆಗಳು ಎಷ್ಟು ಪ್ರಾಮುಖ್ಯತೆ ಪಡೆದಿವೆ ಎಂಬುದನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಕಾರ್ಯದರ್ಶಿಗಳಾದ ಶ್ರೀ ತಿಪ್ಪೇಸ್ವಾಮಿ, ಜಿಲ್ಲಾ ಗೈಡ್ ತರಬೇತಿದಾರರಾದ ಶ್ರೀಮತಿ ರೇಣುಕಾ ಶಾಲೆಯ ದೈಹಿಕ ಶಿಕ್ಷಕ ಸಿಬ್ಬಂದಿ ಹಾಗೂ ಇತರ ಶಿಕ್ಷಕರ ವೃಂದ ಭಾಗವಹಿಸಿದ್ದರು. ಮಕ್ಕಳಿಂದ ಮೂಡಿ ಬಂದ ಕನ್ನಡ, ಹಿಂದಿ ಮತ್ತು ಇಂಗ್ಲಿಷ್‌ನ ಚಿಕ್ಕ ಭಾಷಣಗಳು ಹಾಗೂ ದೇಶಭಕ್ತಿ ನೃತ್ಯಗಳು ಕಾರ್ಯಕ್ರಮಕ್ಕೆ ಮೆರಗು ತಂದವು.






**District Training Commissioner Meet**
Host by Bengaluru South District
At Neelakurinji Camping Camp, Ketti (Nilgiris)
23 - 27 October 2024

# ಶ್ರದ್ಧಾಂಜಲಿ



ರಾಮನಗರ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಉಪನಿರ್ದೇಶಕರು (ಆಡಳಿತ) ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಲ್ಲಿ ಸಹಾಯಕ ಜಿಲ್ಲಾ ಆಯುಕ್ತರು ಮತ್ತು ಜಿಲ್ಲಾ ಮುಖ್ಯ ಆಯುಕ್ತರಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ **ಶ್ರೀ ಸೋಮಶೇಖರಯ್ಯ ರವರು** ದಿನಾಂಕ 17 ಅಕ್ಟೋಬರ್ 2024ರಂದು ನಿಧನರಾದರು. ಇವರಿಗೆ 60 ವರ್ಷ ವಯಸ್ಸಾಗಿತ್ತು.

ಶ್ರೀಯುತರು ಸರಳ, ಸಜ್ಜನಿಕ ಹಾಗೂ ಉತ್ತಮ ರೀತಿಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಮನಗರ ಜಿಲ್ಲಾ ಸಂಸ್ಥೆಯಿಂದ ನಡೆಯುತ್ತಿದ್ದ ಎಲ್ಲಾ ರೀತಿಯ ಚಟುವಟಿಕೆಗಳಿಗೆ ಸಹಕಾರ ನೀಡುತ್ತಿದ್ದರು.



ಬಿ.ಎಂ ಹಿರಿಯ ಪ್ರಾಥಮಿಕ ಶಾಲೆ ಉಳ್ಳಾಲ, ದಕ್ಷಿಣ ಕನ್ನಡ ಜಿಲ್ಲೆಯ ನಿವೃತ್ತ ಶಿಕ್ಷಕಿ ಹಾಗೂ ಫ್ಲಾಕ್ ಲೀಡರ್ **ಶ್ರೀಮತಿ ಕಾಮಿನಿ ಉಚ್ಚಿಲ** ಇವರು ಅಕ್ಟೋಬರ್ 17 ರಂದು ನಿಧಾನರಾಗಿರುತ್ತಾರೆ. ಇವರಿಗೆ 72ವರ್ಷ ವಯಸ್ಸಾಗಿತ್ತು.

ಇವರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಹಾಗೂ ತಾಲ್ಲೂಕು ಸಂಸ್ಥೆಯಿಂದ ನಡೆಯುತ್ತಿದ್ದ ಎಲ್ಲಾ ಕಾರ್ಯಕ್ರಮ ಮತ್ತು ಚಟುವಟಿಕೆಗಳಲ್ಲಿ ಸಕ್ರೀಯವಾಗಿಭಾಗವಹಿಸುತ್ತಿದ್ದರು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

–ರಾಜ್ಯ ಕಾರ್ಯದರ್ಶಿ

SHAHEEN
GROUP OF INSTITUTIONS

**5000+** Alumni Secured Govt. MBBS Seats

**10000+** Alumni Secured Seats in other Professional Courses

**35000** Students

**103** Branches

Where **Education Recreates** Personality

**150+** AICU Centers

**02** Countries

**15** States





Toll Free: 1800 121 6235 | www.shaheengroup.org

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 32)




**If not delivered, please return to :**
**THE EDITOR, Karnataka Scout & Guide**
**State Headquarters, Shanthi Gruha**
**#39, Palace Road, Bengaluru - 560 001**
**Ph.: 080-22260017, 22267470**
**e-mail.: info@bsgkarnataka.org**
**shanthigruha@scout.org.in**
**www.bsgkarnataka.org**

Published, Editor and Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Road, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001.
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru 560 026